ಸುದ್ದಿ ಹಾಗೂ ಜಾಹೀರಾತಿಗೆ ಸಂಪರ್ಕಿಸಿ
9980498553
9606979449

RNI: KNKAN/ 25/A2724

# ಉತ್ತರ ಕರ್ನಾಟಕ ಸುದ್ದಿಗಳು

UTTARA KARNATAKA SUDDIGALU
Kannada Daily Morning
ಕನ್ನಡ ದಿನಪತ್ರಿಕೆ

Email
uttarkarnatkasuddigalu@gmail.com

ಸಂಪಾದಕರು: ಅವಿನಾಶ ಎಸ್. ಸಾಲಿಮನಿ




ಲಿಂಗೈಕ್ಯ ತೋಂಟದ ಸಿದ್ದಲಿಂಗ ಶ್ರೀಗಳ ಎಂಟನೇ ಪುಣ್ಯಸ್ಮರಣೆ ಅ. 22ರಂದು »3

ಜಿಲ್ಲೆಯ ನೀರಾವರಿ ಯೋಜನೆಗಳು ರೈತರ ಪಾಲಿಗೆ ಕಾಗದಕ್ಕೆ ಸೀಮಿತ »2

ನಾನು ಕಂಡ ನಾನಾ ಪಾಟೇಕರ್ »3

ಸಂಪುಟ(Volume): 1 ಸಂಚಿಕೆ (Issue): 300 ● ಪುಟ (Page): 4 ● ದರ: Rs. 4 ಗುರುವಾರ 15 ಅಕ್ಟೋಬರ್ 2026 ● 15 OCTOBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ ● ಬೆಳಗಾವಿ ಉತ್ತರ ಕನ್ನಡ

## ರಾಹುಲ್ ಜೀ ಮತ್ತೊಂದು ಸೋಲಿಗೆ ಸಿದ್ಧರಾಗಿ: ಅಮಿತ್ ಶಾ

**ನವದೆಹಲಿ:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ವಿರುದ್ಧ ವಿರೋಧ ಪಕ್ಷಗಳು ನಡೆಸುತ್ತಿರುವ ಪ್ರತಿಭಟನೆಗಳ ಹಿನ್ನೆಲೆಯಲ್ಲಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ತೀವ್ರವಾಗಿ ಟೀಕಿಸಿದರು ಮತ್ತು 2029ರ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತ್ತೊಂದು "ಭಾರಿ ಸೋಲು" ಕಾದಿದೆ ಎಂದು ಭವಿಷ್ಯ ನುಡಿದರು.



ಬಿಜೆಪಿ, ಎನ್‌ಡಿಎ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕರ ಬೆಂಬಲವನ್ನು ಮುಂದುವರಿಸಿದ್ದಾರೆ ಎಂದು ಹೇಳಿದ ಶಾ, ಚುನಾವಣೆಯಲ್ಲಿ ಗೆಲ್ಲಲು ಸಹಾಯಕವಾಗದ "ನಕಾರಾತ್ಮಕ ರಾಜಕೀಯ"ವನ್ನು ಕಾಂಗ್ರೆಸ್ ಅನುಸರಿಸುತ್ತಿದೆ ಎಂದು ಆರೋಪಿಸಿದರು.
"ರಾಹುಲ್ ಜೆ ಮತ್ತು ಅವರ ಸಹಚರರಿಗೆ ನಾನು ಹೇಳಬಯಸುವುದೇನೆಂದರೆ, 2029ರಲ್ಲಿ ಮತ್ತೊಮ್ಮೆ ಭಾರಿ ಸೋಲನ್ನು ಎದುರಿಸಲು ಸಿದ್ಧರಾಗಿ," ಎಂದು ಶಾ ಸುದ್ದಿಗಾರರಿಗೆ ತಿಳಿಸಿದರು. ಎನ್‌ಡಿಎ ಭಾರಿ ಬಹುಮತದೊಂದಿಗೆ ಗೆಲುವು ಸಾಧಿಸಲಿದೆ ಮತ್ತು ಕಾಂಗ್ರೆಸ್ ಸತತ ನಾಲ್ಕನೇ ಬಾರಿಗೆ ಸೋಲನ್ನು ಅನುಭವಿಸಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.
"ಈ ದೇಶದ ಜನರು ನರೇಂದ್ರ ಮೋದಿ ಅವರೊಂದಿಗೆ, ಬಿಜೆಪಿಯೊಂದಿಗೆ ಮತ್ತು ಎನ್‌ಡಿಎಯೊಂದಿಗೆ ಇದ್ದಾರೆ. ಈ ಸತ್ಯವನ್ನು ನೀವು ಅಲ್ಲಗಳೆಯಲು ಸಾಧ್ಯವಿಲ್ಲ," ಎಂದು ಅವರು ಹೇಳಿದರು.
ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ' ಕುರಿತು ಗಾಂಧಿ ವ್ಯಕ್ತಪಡಿಸಿದ ಟೀಕೆಯನ್ನು ಪ್ರಶ್ನಿಸಿದ ಶಾ, ಒಳನುಸುಳುಕೋರರನ್ನು ಮತದಾರರನ್ನಾಗಿ ನೋಂದಾಯಿಸಲು ಕಾಂಗ್ರೆಸ್ ನಾಯಕ ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು. ಅಲ್ಲದೆ, 2024ರ ಸಾರ್ವತ್ರಿಕ ಚುನಾವಣೆಗಳ ನಂತರ ಪ್ರಾರಂಭವಾದ ಈ ಪರಿಷ್ಕರಣಾ ಪ್ರಕ್ರಿಯೆಯೊಂದಿಗೆ ವಿರೋಧ ಪಕ್ಷದ ಆರೋಪಗಳಿಗೆ ಏನಾದರೂ ಸಂಬಂಧವಿದೆಯೇ ಎಂದು ಅವರು ಪ್ರಶ್ನಿಸಿದರು.
ಕಾಂಗ್ರೆಸ್‌ನ ಚುನಾವಣಾ ಸೋಲುಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವಂತೆಯೂ ಶಾ ಗಾಂಧಿಯವರಿಗೆ ಸಲಹೆ ನೀಡಿದರು. ಅವರು ಪಕ್ಷದ ಪ್ರಮುಖ ನಾಯಕರಾದಾಗಿನಿಂದ, ನಂತರ ಅಧ್ಯಕ್ಷರಾಗಿ ಮತ್ತು ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಅವಧಿಯವರೆಗೂ ಪಕ್ಷವು ನಿರಂತರವಾಗಿ ಚುನಾವಣೆಗಳಲ್ಲಿ ಸೋಲುತ್ತಲೇ ಬಂದಿದೆ ಎಂದು ಅವರು ಹೇಳಿದರು.
"ಕಟ್ಟುಕಥೆಯ ಮಾಧ್ಯಮ ಕಾರ್ಯಕ್ರಮಗಳು ಮತ್ತು ಸುಳ್ಳುಗಳ ಪ್ರತಿಧ್ವನಿಗಳ ಮೂಲಕ ನೀವು ದೇಶದ ಜನರ ವಿಶ್ವಾಸವನ್ನು ಗೆಲ್ಲಲು ಸಾಧ್ಯವಿಲ್ಲ," ಎಂದು ಶಾ ಹೇಳಿದರು.

## ರಘೋಪುರದಲ್ಲಿ ಘೋರ ದುರಂತ

### 13 ಜನರ ಸಾವು । ನಾಲ್ವರು ನಾಪತ್ತೆ

**ವೈಶಾಲಿ(ಬಿಹಾರ):** ಗಂಗಾ ನದಿಯಲ್ಲಿ ಮಂಗಳವಾರ ದೋಣಿಯೊಂದು ಮಗುಚಿ ಬಿದ್ದ ಪರಿಣಾಮ ಮಕ್ಕಳೂ ಸೇರಿದಂತೆ ಕನಿಷ್ಠ 13 ಮಂದಿ ಮೃತಪಟ್ಟಿರುವ ಘಟನೆ ಬಿಹಾರದ ವೈಶಾಲಿ ಜಿಲ್ಲೆಯಲ್ಲಿ ನಡೆದಿದೆ. ದೋಣಿಯಲ್ಲಿ ಸುಮಾರು 15 ರಿಂದ 20 ಮಂದಿ ಪ್ರಯಾಣಿಸುತ್ತಿದ್ದರು ಮತ್ತು ಅವರೆಲ್ಲರೂ ಔತಣಕೂಟವೊಂದರಲ್ಲಿ ಭಾಗವಹಿಸಲು ತೆರಳುತ್ತಿದ್ದರು ಎಂದು ವರದಿಯಾಗಿದೆ.



ವೈಶಾಲಿ ಜಿಲ್ಲೆಯ ರಘೋಪುರ ಪ್ರದೇಶದಲ್ಲಿ ಸಂಭವಿಸಿದ್ದು, ಮೃತಪಟ್ಟವರಲ್ಲಿ ಹೆಚ್ಚಿನವರು ಮಕ್ಕಳೆಂದು ಹೇಳಲಾಗಿದೆ. ರಕ್ಷಿಸಲ್ಪಟ್ಟವರಲ್ಲಿ 7 ಮಂದಿಗೆ ಚಿಕಿತ್ಸೆನೀಡಲಾಗುತ್ತಿದೆ. ದುರ್ಘಟನೆಯಲ್ಲಿ ಮುಳುಗಿದವರಲ್ಲಿ ಇನ್ನೂ ನಾಲ್ಕು ಮಂದಿ ನಾಪತ್ತೆಯಾಗಿದ್ದಾರೆ.
ಅಪಘಾತದ ನಂತರ ಅಧಿಕಾರಿಗಳ ತಂಡವೊಂದು ಸ್ಥಳಕ್ಕೆ ತೆರಳಿದೆ. ಪರಿಹಾರ ಮತ್ತು ರಕ್ಷಣಾ ಕಾರ್ಯಗಳನ್ನು ಕೈಗೊಳ್ಳಲು ಎನ್ ಡಿಆರ್‌ಎಫ್ (ಓಆಖಿಈ) ತಂಡಗಳನ್ನು ಸಹ ಆ ಪ್ರದೇಶಕ್ಕೆ ನಿಯೋಜಿಸಲಾಗಿದೆ. ನದಿಯಲ್ಲಿ ನಾಪತ್ತೆಯಾದವರಿಗಾಗಿ ನಡೆಸಲಾಗುತ್ತಿರುವ ಹುಡುಕಾಟ ಕಾರ್ಯದಲ್ಲಿ ಸ್ಥಳೀಯ ಗ್ರಾಮಸ್ಥರು ಕೂಡ ಆಡಳಿತದೊಂದಿಗೆ ಸಹಕರಿಸುತ್ತಿದ್ದಾರೆ. ರಕ್ಷಣಾ ಕಾರ್ಯಾಚರಣೆ ಮುಂದುವರಿದಿದ್ದು, ಆಡಳಿತ ಮಂಡಳಿಯು ಸಂಪೂರ್ಣ ಪರಿಸ್ಥಿತಿಯ ಮೇಲೆ ನಿಗಾ ವಹಿಸಿದೆ.
ಮೃತರ ಕುಟುಂಬಕ್ಕೆ 4 ಲಕ್ಷ ಪರಿಹಾರ
ನದಿಯಲ್ಲಿ ನಾಪತ್ತೆಯಾದವರಿಗಾಗಿ ನಡೆಸಲಾಗುತ್ತಿರುವ ಹುಡುಕಾಟ ಕಾರ್ಯದಲ್ಲಿ ಸ್ಥಳೀಯ ಗ್ರಾಮಸ್ಥರು ಕೂಡ ಆಡಳಿತದೊಂದಿಗೆ ಸಹಕರಿಸುತ್ತಿದ್ದಾರೆ. ರಕ್ಷಣಾ ಕಾರ್ಯಾಚರಣೆ ಮುಂದುವರಿದಿದ್ದು, ಆಡಳಿತವು ಸಂಪೂರ್ಣ ಪರಿಸ್ಥಿತಿಯ ಮೇಲೆ ನಿಗಾ ವಹಿಸಿದೆ. ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರು ಮೃತರ ಕುಟುಂಬಗಳಿಗೆ 4 ಲಕ್ಷ ರೂಪಾಯಿಗಳ ಆರ್ಥಿಕ ನೆರವು ನೀಡುವುದಾಗಿ ಘೋಷಿಸಿದ್ದಾರೆ.
"ವೈಶಾಲಿಯ ರಘೋಪುರ್‌ನಲ್ಲಿ ಸಂಭವಿಸಿದ ದೋಣಿ ಅಪಘಾತದಲ್ಲಿ ಅಮಾಯಕ ಜೀವಗಳು ಬಲಿಯಾಗಿರುವ ಸುದ್ದಿ ಅತ್ಯಂತ ದುಃಖಕರ ಮತ್ತು ಮನಕಲಕುವಂತಿದೆ. ಈ ಕಠಿಣ ಸಮಯದಲ್ಲಿ, ಮೃತರ ಕುಟುಂಬಗಳಿಗೆ ನನ್ನ ತೀವ್ರ ಸಂತಾಪಗಳು. ದೇವರು ಮೃತರ ಆತ್ಮಗಳಿಗೆ ಶಾಂತಿ ನೀಡಲಿ ಮತ್ತು ಈ ಅಪಾರ ದುಃಖವನ್ನು ಭರಿಸುವ ಶಕ್ತಿಯನ್ನು ಕುಟುಂಬಗಳಿಗೆ ನೀಡಲಿ," ಎಂದು ಸಾಮ್ರಾಟ್ ಚೌಧರಿ 'ಎಕ್ಸ್' ಪೋಸ್ಟ್‌ನಲ್ಲಿ ಬರೆದಿದ್ದಾರೆ.
ಬಿಹಾರದ ಮಾಜಿ ಉಪಮುಖ್ಯಮಂತ್ರಿ ಮತ್ತು ಆರ್ ಜೆಡಿ ಮುಖಂಡ ತೇಜಸ್ವಿ ಯಾದವ್ ತಮ್ಮ ಎಕ್ಸ್ ಪೋಸ್ಟ್ ನಲ್ಲಿ "ರಘೋಪುರ್ ದಿಯಾರಾ ಪ್ರದೇಶದಲ್ಲಿ ದೋಣಿ ಮಗುಚಿ ಬಿದ್ದಿರುವ ದುರದೃಷ್ಟಕರ ಮತ್ತು ದುರಂತ ಸುದ್ದಿಯನ್ನು ನಾವು ಸ್ವೀಕರಿಸಿದ್ದೇವೆ. ಮುಳುಗಿದವರಲ್ಲಿ ಹೆಚ್ಚಿನವರು ಮಕ್ಕಳು. ದೇವರು ಎಲ್ಲರನ್ನೂ ಸುರಕ್ಷಿತವಾಗಿರಿಸಲಿ. ಸ್ಥಳೀಯರು, ಆಡಳಿತ ಮತ್ತು ಅಧಿಕಾರಿಗಳೊಂದಿಗೆ ಚರ್ಚಿಸಿದ ನಂತರ, ಪರಿಹಾರ, ರಕ್ಷಣೆ ಮತ್ತು ಚಿಕಿತ್ಸಾ ಕಾರ್ಯಗಳನ್ನು ತ್ವರಿತಗೊಳಿಸಲು ಸೂಚನೆ ನೀಡಲಾಗಿದೆ," ಎಂದು ತಿಳಿಸಿದ್ದಾರೆ.

## ಬ್ಯಾನರ್ಜಿ ಮೇಲೆ ಚಾಕು ದಾಳಿಗೆ ಯತ್ನ

**ಕೊಲ್ಕತ್ತಾ:** ಪಶ್ಚಿಮ ಬಂಗಾಳದಿಂದ ಆಘಾತಕಾರಿ ಸುದ್ದಿ ಹೊರಬಿದ್ದಿದೆ. ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮೇಲೆ ಚಾಕುವಿನಿಂದ ದಾಳಿ ಮಾಡಲು ಯತ್ನಿಸಲಾಗಿದೆ ಎಂದು ತೃಣಮೂಲ ಕಾಂಗ್ರೆಸ್ (ಮಮತಾ ಬಣ) ಆರೋಪಿಸಿದೆ. ಮಾದಕ ವ್ಯಸನಿ ಮಹಿಳೆಯೊಬ್ಬರು ಮಮತಾ ಬ್ಯಾನರ್ಜಿ ಅವರ ಮನೆ ಬಳಿ ಬಂದು ಚಾಕುವಿನಿಂದ ದಾಳಿ ಮಾಡಲು ಯತ್ನಿಸಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿಯ ಪಕ್ಷ ಆರೋಪಿಸಿದೆ. ಈ ಹೇಳಿಕೆ ಎಲ್ಲರನ್ನೂ ಬೆಚ್ಚಿಬೀಳಿಸಿದೆ.
ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಮೇಲೆ ನಡೆದ ಚಾಕು ದಾಳಿಯ ಪ್ರಯತ್ನವನ್ನು ತೃಣಮೂಲ ಕಾಂಗ್ರೆಸ್ (ಮಮತಾ ಬಣ) ಒಂದು ಪಿತೂರಿ ಎಂದು ಕರೆದಿದೆ. ಪಕ್ಷದ ಮಾಜಿ ಸಂಸದ ಸಾಕೇತ್ ಗೋಖಲೆ, ಇಂದು ಮಾದಕ ವ್ಯಸನಿಯೊಬ್ಬಳು ಮಮತಾ ಬ್ಯಾನರ್ಜಿ ಅವರ ಮನೆಗೆ ಬಂದು ಚಾಕುವಿನಿಂದ ದಾಳಿ ಮಾಡಲು ಯತ್ನಿಸಿದ್ದಾಳೆ.
ಬಂಗಾಳದಲ್ಲಿ ಪರಿಸ್ಥಿತಿ ಹೇಗಿದೆ ಎಂದ-ರೆ ಭದ್ರತೆ ಹೊಂದಿರುವ ಮತ್ತು ಮೂರು ಬಾರಿ ಮುಖ್ಯಮಂತ್ರಿಯಾಗಿದ್ದ ನಾಯಕಿಯೂ



ಸುರಕ್ಷಿತವಾಗಿಲ್ಲ. ಇದು ಬಿಜೆಪಿಯ ಉದ್ದೇಶಪೂರ್ವಕ ಪಿತೂರಿಯೇ, ದೀದಿ ದೆಹಲಿಯಲ್ಲಿ ಅವರನ್ನು ನಿರ್ಮೂಲನೆ ಮಾಡಲು ನಿರ್ಧರಿಸಿದ್ದಾರೆಯೇ? ಈ ಬಗ್ಗೆ ದೂರು ದಾಖಲಾಗಿದೆ.
ನಾಗರಿಕ ಸ್ವಯಂಸೇವಕಿ ಮತ್ತು ಮಾದಕ ವ್ಯಸನಿಯಾಗಿರುವ ತನ್ನಿಷ್ಠ ಸಹಾ ಎಂಬ ಮಹಿಳೆ ತಮ್ಮನ್ನು ಸೊಸೆ ಎಂದು ಪರಿಚಯಿಸಿಕೊಂಡು ಹಿಂಸಾತ್ಮಕ ರೀತಿಯಲ್ಲಿ ಮಮತಾ ಬ್ಯಾನರ್ಜಿ ಅವರ ಮೇಲೆ ಚಾಕುವಿನಿಂದ ಹಲ್ಲೆಗೆ ಯತ್ನಿಸಿದ್ದಾರೆ. ಮಹಿಳೆ ಅವಾಚ್ಯವಾಗಿ ನಿಂದಿಸಿದ್ದು ಕುಡಿದ ಮತ್ತಿನಲ್ಲಿ ಮಮತಾ ಬ್ಯಾನರ್ಜಿ ಬಳಿ ಬಂದು ಹಲ್ಲೆಗೆ ಯತ್ನಿಸಿದ್ದಾರೆ.

## ಕೊಪ್ಪಳದಲ್ಲಿ ದಿಢೀರ್ ಪೊಲೀಸ್ ಬೇಟೆ: 77 ಬಾರ್, ರೆಸ್ಟೋರೆಂಟ್‌ಗಳ ಮೇಲೆ ಮುಗಿಬಿದ್ದ ಖಾಕಿ ಪಡೆ!

**ಕೊಪ್ಪಳ:** ಜಿಲ್ಲೆಯಲ್ಲಿ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಾಹಿಲ್ ಬಾಗ್ಲಾ ನೇತೃತ್ವದಲ್ಲಿ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ಜಿಲ್ಲೆಯಾದ್ಯಂತ ಒಟ್ಟು 77 ಬಾರ್ ಹಾಗೂ ರೆಸ್ಟೋರೆಂಟ್‌ಗಳ ಮೇಲೆ ಏಕಕಾಲಕ್ಕೆ ಅನಿರೀಕ್ಷಿತ ದಾಳಿ ನಡೆಸಿ ಮಹತ್ವದ ಮಾಹಿತಿಗಳನ್ನು ಕಲೆಹಾಕಿದ್ದಾರೆ.
ಈ ಕಾರ್ಯಾಚರಣೆಯ ವೇಳೆ ಬಾರ್‌ಗಳಲ್ಲಿ ಪರವಾನಗಿ ದಾಖಲಾತಿಗಳು, ಮಕ್ಕಳನ್ನು ಕೆಲಸಕ್ಕೆ ಸೇರಿಸಿಕೊಂಡಿರುವ ಬಗ್ಗೆ ಹಾಗೂ ನಿಗದಿತ ಸಮಯದ ಪಾಲನೆ ಸರಿಯಾಗಿ ಆಗುತ್ತಿದೆಯೇ ಎಂಬುದನ್ನು ಎಸ್‌ಪಿ ಸಾಹಿಲ್ ಬಾಗ್ಲಾ ಖುದ್ದು ಪರಿಶೀಲನೆ ನಡೆಸಿದರು.



ಈ ಸಂದರ್ಭದಲ್ಲಿ ಅಕ್ರಮ ಜೂಜಾಟದಲ್ಲಿ ತೊಡಗಿದ್ದ ಸ್ಥಳದಿಂದ ರೂ. 1.94 ಲಕ್ಷ ನಗದು ವಶಪಡಿಸಿಕೊಂಡು ಒಟ್ಟು 20 ಪ್ರಕರಣಗಳನ್ನು ದಾಖಲಿಸಲಾಗಿದೆ.
ಮಟ್ಕಾ ದಂಧೆ ಭೇದಿಸಿದ ಪೊಲೀಸರು: ಮಟ್ಕಾ ದಂಧೆಯಲ್ಲಿ ಭಾಗಿಯಾಗಿದ್ದ 19 ಜನರ ವಿರುದ್ಧ ಪ್ರಕರಣ ದಾಖಲಿಸಿ, ಅವರಿಂದ ರೂ. 20,600 ವಶಕ್ಕೆ ಪಡೆಯಲಾಗಿದೆ.
ಒಟ್ಟು ಪ್ರಕರಣಗಳು: ದಾಳಿಯ ವೇಳೆ ಒಟ್ಟು 39 ಪ್ರಕರಣಗಳು ದಾಖಲಾಗಿವೆ.
"ಜಿಲ್ಲೆಯಲ್ಲಿ ಯಾವುದೇ ರೀತಿಯ ಅಕ್ರಮ ಚಟುವಟಿಕೆ ಹಾಗೂ ಸಂಘಟಿತ ಅಪರಾಧಗಳಿಗೆ ಅವಕಾಶ ನೀಡುವುದಿಲ್ಲ. ಈ ಕುರಿತು ವಿಶೇಷ ನಿಗಾ ವಹಿಸಲಾಗಿದ್ದು, ನಿಯಮ ಮೀರುವ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು" ಎಂದು ಎಸ್‌ಪಿ ಸಾಹಿಲ್ ಬಾಗ್ಲಾ ಎಚ್ಚರಿಕೆ ನೀಡಿದ್ದಾರೆ.

## ಆಸ್ತಿ ವೈಷಮ್ಯ, ಬಾಲಕನ ಹತ್ಯೆ

**ಬೆಂಗಳೂರು:** ಆಸ್ತಿ ವೈಷಮ್ಯಕ್ಕೆ ಕಿರಾತಕನೊಬ್ಬ ಸ್ವಂತ ಅಣ್ಣನ 15 ವರ್ಷದ ಮಗನನ್ನು ಮಚ್ಚಿನಿಂದ ಹಲ್ಲೆ ನಡೆಸಿ ಕೊಲೆಗೈದಿರುವ ದಾರುಣ ಘಟನೆ ಸೋಲದೇವನಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಸೋಮವಾರ(ಅ.14ರಂದು) ನಡೆದಿದೆ. ಇಂದಿರಾ ಕಾಲೋನಿಯ ಕೃಷ್ಣ (15) ಕೊಲೆಯಾದ ದುರ್ದೈವಿ. ಆರೋಪಿ ಮೋಹನ್ (45) ಎಂಬುವವನನ್ನು ಬಂಧಿಸಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.
ಸರ್ಕಾರಿ ಶಾಲೆಯಲ್ಲಿ 10ನೇ ತರಗತಿ ವ್ಯಾಸಂಗ ಮಾಡುತ್ತಿದ್ದ ಕೃಷ್ಣ, ಅವರ ಅಣ್ಣ ಯಶವಂತ ಇಬ್ಬರೇ ವಾಸಿಸುತ್ತಿದ್ದರು. ಅವರ ತಂದೆ ಮುನಿರಾಜು ಹಾಗೂ ತಾಯಿ ಬಾಲ್ಯದಲ್ಲಿಯೇ ತೀರಿಕೊಂಡಿದ್ದರು. ಮುನಿರಾಜು ಅವರಿಗೆ ಕುಂದಾಣ ಸಮೀಪ ಪಿತ್ರಾರ್ಜಿತವಾಗಿ 1 ಎಕರೆ ಜಮೀನಿತ್ತು. ಇದರಲ್ಲಿ ಮುನಿರಾಜು ತಮ್ಮ ಮೋಹನ್ ಹಾಗೂ ಸೋದರಿಯರಿಗೂ ಪಾಲಿತ್ತು. ಕೆಲ ತಿಂಗಳ ಹಿಂದೆ ಮೋಹನ್, ಅಣ್ಣನ ಮಕ್ಕಳಾದ ಯಶವಂತ, ಕೃಷ್ಣ ಹಾಗೂ ಸಹೋದರಿ ಪುಷ್ಪಾಗೆ ತಿಳಿಸದೆ ಒಂದು ಎಕ-ರೆ ಜಮೀನನ್ನು ಬಿಲ್ಡರ್ ಒಬ್ಬರಿಗೆ ಮಾರಾಟ ಮಾಡಲು ಸಿದ್ಧತೆ ನಡೆಸಿದ್ದ. ಸಹಿ ನಕಲು ಮಾಡಿದ್ದ. ಈ ವಿಚಾರ ತಡವಾಗಿ ಗೊತ್ತಾದ ಬಳಿಕ ಬಿಲ್ಡರ್ ಜಮೀನು ಖರೀದಿ ಪ್ರಕ್ರಿಯೆಯಲ್ಲಿ ಮುನಿರಾಜು ಮಕ್ಕಳು ಹಾಗೂ ಇತರ ಹಕ್ಕುದಾರರನ್ನು ಸೇರಿಸಿಕೊಂಡಿದ್ದರು. ಜತೆಗೆ, ಯಶವಂತ, ಕೃಷ್ಣ ಖಾತೆಗೆ ಮುಂಗಡವಾಗಿ ತಲಾ 13 ಲಕ್ಷ ರೂ. ಜಮೆ ಮಾಡಿದ್ದರು. **ನಡುರಾತ್ರಿ ಕೊಂದ ಕಟುಕ:** ಆಸ್ತಿಯಲ್ಲಿ ಪಾಲು ಪಡೆದರು ಎಂದು ದ್ವೇಷ ಸಾಧಿಸತೊಡಗಿದ್ದ ಮೋಹನ್, ಸೋಮವಾರ ರಾತ್ರಿ ಮಚ್ಚು ಹಿಡಿದು ಇಂದಿರಾ ಕಾಲೋನಿಯಲ್ಲಿನ ಮನೆಗೆ ನುಗ್ಗಿದ್ದ. ಕೊಠಡಿಯಲ್ಲಿ ಮಲಗಿದ್ದ ಕೃಷ್ಣನ ತಲೆಗೆ ಹಲವು ಬಾರಿ ಹಲ್ಲೆ ನಡೆಸಿ ಕೊಲೆಗೈದು ಬಂದಿದ್ದ. ಮಂಗಳವಾರ(ಅ.13ರಂದು) ಬೆಳಗ್ಗೆ ವಿಶ್ವನಾಥಪುರ ಪೊಲೀಸ್ ಠಾಣೆಗೆ ತೆರಳಿ ತಾನು ತನ್ನ ಅಣ್ಣನ ಮಗ ಕೃಷ್ಣನನ್ನು ಕೊಂದಿರುವುದಾಗಿ ಒಪ್ಪಿಕೊಂಡು ಶರಣಾಗಿದ್ದ. ಈ ಸುದ್ದಿ ಕೇಳಿ ಕಂಗಾಲಾದ ಅಲ್ಲಿನ ಪೊಲೀಸರು ಸೋಲದೇವನಹಳ್ಳಿ ಠಾಣೆಗೆ ಮಾಹಿತಿ ನೀಡಿದ್ದರು. ಇದರಿಂದ ತಕ್ಷಣ ಪೊಲೀಸ್ ಅಧಿಕಾರಿಗಳು ಇಂದಿರಾ ಕಾಲೋನಿ ಮನೆಗೆ ದೌಡಾಯಿಸಿದಾಗ ಕೊಠಡಿಯಲ್ಲಿ ಬಾಲಕ ಕೃಷ್ಣ ಕೊಲೆಯಾಗಿರುವ ಮೃತದೇಹ ಪತ್ತೆಯಾಗಿತ್ತು ಎಂದು ಹಿರಿಯ ಅಧಿಕಾರಿಯೊಬ್ಬರು ವಿವರಿಸಿದರು.

### 'ಪ್ರೇಮದ ಊರಲಿ' ಸಿನಿಮಾಗೆ ಹೋಗಿದ್ದ ಅಣ್ಣ

ಕೂಲಿ ಕೆಲಸ ಮಾಡುವ ಯಶವಂತ ಸೋಮವಾರ ರಾತ್ರಿ 'ಪ್ರೇಮದ ಊರಲಿ ಸಿನಿಮಾ' ನೋಡಲು ಹೋಗಿ ತಡರಾತ್ರಿ ಮನೆಗೆ ಬಂದಿದ್ದ. ತಮ್ಮ ಕೃಷ್ಣನ ಕೊಠಡಿಗೆ ಹೋಗದೆ ನೇರವಾಗಿ ತನ್ನ ಕೊಠಡಿಗೆ ಹೋಗಿ ಮಲಗಿದ್ದ. ಮಂಗಳವಾರ ಪೊಲೀಸರು ಮನೆಗೆ ತೆರಳಿ ಎಬ್ಬಿಸುವ ತನಕ ತಮ್ಮನ ಕೊಲೆಯಾಗಿರುವುದು ಅವನಿಗೆ ಗೊತ್ತಿರಲಿಲ್ಲ ಎಂದು ಅಧಿಕಾರಿ ಹೇಳಿದರು.

## ರೋಣ ಹೆಸ್ಕಾಂ ಸೆಕ್ಷನ್ ಅಧಿಕಾರಿ ಲೋಕಾ ಬಲೆಗೆ

### ಪಶು ಸಾಕಾಣಿಕೆ ಶೆಡ್‌ಗೆ ವಿದ್ಯುತ್ ಸಂಪರ್ಕ ನೀಡಲು ಲಂಚಕ್ಕೆ ಬೇಡಿಕೆ

**ರೋಣ:** ಪಶು ನಿರ್ಮಾಣದ ಶೆಡ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಲು 20 ಸಾವಿರ ರೂಪಾಯಿ ಲಂಚ-ಕ್ಕೆ ಬೇಡಿಕೆ ಇಟ್ಟಿದ್ದ ಇಲ್ಲಿಯ ಹೆಸ್ಕಾಂ ಉಪವಿಭಾಗದ ಸೆಕ್ಷನ್ ಆಫಿಸರ್ ಮಾಬುಸಾಬ್ ಮಕ್ತುಂಸಾಬ್ ಆಡಿನ ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ವಶಕ್ಕೆ ಪಡೆದುಕೊಂಡಿದ್ದಾರೆ.
ಪ್ರಕರಣದ ಹಿನ್ನೆಲೆ:
ತಾಲೂಕಿನ ಕೊತಬಾಳ ಗ್ರಾಮದ ಮೇಘಯ್ಯ ಶೇಖರಯ್ಯ ಹಿರೇಮಠ ಎಂಬುವರು ತಮ್ಮ ಜಮೀನಿನಲ್ಲಿ ಪಶು ಸಾಕಾಣಿಕೆಗಾಗಿ ಶೆಡ್ ನಿರ್ಮಿಸಿಕೊಂಡಿದ್ದು, ಶೆಡ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಲು ಹೆಸ್ಕಾಂಗೆ ಅರ್ಜಿ ಸಲ್ಲಿಸಿದ್ದರು. ಆದರೆ, ಶೆಡ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಲು ವಿದ್ಯುತ್ ಗುತ್ತಿಗೆದಾರ ಮಹಾದೇವ ಸಜ್ಜನವರ ಎಂಬುವರ ಮೂಲಕ 20 ಸಾವಿರ ರೂಪಾಯಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. 15 ಸಾವಿರಕ್ಕೆ ಒಪ್ಪಿ 5000 ರೂ. ಫೋನ್ ಪೇ ಮಾಡಿಸಿಕೊಂಡು ಉಳಿದ 10 ಸಾವಿರ ರೂ. ನೀಡುವಂತೆ ಒತ್ತಾಯ ಮೇಲಿಂದ ಮೇಲೆ ಮಾಡಿದ್ದರು. ಇದರಿಂದ ನೊಂದ ಅರ್ಜಿದಾರ ಲೋಕಾಯುಕ್ತ ಕಚೇರಿಗೆ ದೂರು ನೀಡಿದ್ದರು. ಅದರಂತೆ ಅ. 14ರಂದು ಹೆಸ್ಕಾಂ ಕಚೇರಿ ಮೇಲೆ ದಾಳಿ ಮಾಡಿ ಹಣ ಪಡೆಯುವಾಗ



ರೆಡ್ ಹ್ಯಾಂಡ್ ಆಗಿ ಸೆಕ್ಷನ್ ಅಧಿಕಾರಿ ಮಾಬುಸಾಬ ಆಡಿನ ಅವರನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಧಾರವಾಡ ಲೋಕಾಯುಕ್ತ ಎಸ್‌ಪಿ ಡಾ. ಸಿದ್ದಲಿಂಗಪ್ಪ ನೇತೃತ್ವದಲ್ಲಿ, ಗದಗ ಡಿಎಸ್‌ಪಿ ಲೋಕೇಶ, ಇನ್‌ಸ್ಪೆಕ್ಟರ್ ಎಸ್.ಎಸ್. ತೇಲಿ ಹಾಗೂ ಲೋಕಾಯುಕ್ತ ಸಿಬ್ಬಂದಿ ಇದ್ದರು.

ಉತ್ತರ ಕರ್ನಾಟಕ ಸುದ್ದಿಗಳು
ಕನ್ನಡ ದಿನ ಪತ್ರಿಕೆ

UTTARA KARNATKA SUDDIGALU
Kannada Daily Morning



ಶಕುಂತಲಾ ಬೆಂಗಳೂರು



ಪವಿತ್ರಾ ಕರಡಿಮಠ ಗಂಗಾವತಿ



ವಿಜಯಲಕ್ಷ್ಮಿ ಕರಡಿಮಠ ಗಂಗಾವತಿ



ಬಸವೇಶ್ವರ ಮಹಿಳಾ ಮಂಡಳಿ, ಶಿವಾನಂದ ನಗರ ರೋಣ



ಮುಂಡರಗಿ ನಗರದ ಐಶ್ವರ್ಯ. ಮಧುಶ್ರೀ. ಸಿಂಧೂ. ಗೀತಾ. ಶೃತಿ ಪಾರ್ವತಿ



ಪಲ್ಲೇದ ಕುಟುಂಬ ವರ್ಗ ಶ್ರೀನಗರ ರೋಣ



ರಾಜೀವ್ ಗಾಂಧಿ ಮಹಾವಿದ್ಯಾಲಯ ಸಿಬ್ಬಂದಿ ರೋಣ



ಶ್ರೀ ಸಿದ್ಧಾರೂಢ ಮಹಿಳಾ ಭಜನಾ ಸಂಘ ರೋಣ



ವಿದ್ಯಾ ಗೆಳತಿಯರು, ಧಾರವಾಡ



ಗೀತಾ. ಸ್ನೇಹ. ಕವಿತಾ. ಮಂಜುಳಾ. ದೇವಿಕಾ. ಸಾ ಹುಬ್ಬಳ್ಳಿ



ಶೋಭಾ ಸುಂಕದ, ಹುಬ್ಬಳ್ಳಿ



ಸೌಭಾಗ್ಯ ಗಂಗಾವತಿ



ಕಮ್ಮವಾರಿ ಶಿಕ್ಷಣ ಸಂಸ್ಥೆ ರೆಡ್ಡಿ ವೀರಣ್ಣ ಶಾಲೆ ಶಿಕ್ಷಕ ವೃಂದ ನವನಗರ್ ಕಾರಟಗಿ



ಗಿರಿಜಾ, ಪ್ರೇಮಾ, ವಿದ್ಯಾ ರೋಣ



ಶ್ರೀಮತಿ ಮಂಜುಳಾ ಮಣ್ಣೂರ ಹಾಗೂ ಗೆಳತಿಯರು, ಶಿಗ್ಲಿ



ಈರಮ್ಮ ಹಾಗೂ ಸಂಗಡಿಗರು ಗಂಗಾವತಿ



ವಿದ್ಯಾ, ಆರಾಧ್ಯ ಶಿಗ್ಲಿ



ಸುವರ್ಣಾ ರೋಣ



ಸುಮಾ ಹಿರೇಮಠ



ಸಹನಾ ಹಿರೇಮಠ ಗಂಗಾವತಿ



ಗಂಗಾಧೇಶ್ವರ ಮಹಿಳಾ ಭಂಜಾನ ಮಂಡಳಿ ಗಂಗಾವತಿ




# ಲಿಂಗೈಕ್ಯ ತೋಂಟದ ಸಿದ್ಧಲಿಂಗ ಶ್ರೀಗಳ ಎಂಟನೇ ಪುಣ್ಯಸ್ಮರಣೆ ಅ. 22ರಂದು

**ಗದಗ:** ಲಿಂಗೈಕ್ಯ ತೋಂಟದ ಸಿದ್ಧಲಿಂಗ ಶ್ರೀಗಳ ಎಂಟನೇ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಅ. 22ರಂದು ಹಮ್ಮಿಕೊಳ್ಳಲಾಗಿದೆ ಎಂದು ತೋಂಟದಾರ್ಯ ಮಠದ ಆಡಳಿತಾಧಿಕಾರಿ ಎಸ್. ಎಸ್. ಪಟ್ಟಣಶೆಟ್ಟರ ಹೇಳಿದರು.

ಬುಧವಾರ ಸುದ್ದಿಗೋಷ್ಠೀಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ 2026ನೇ ಸಾಲಿನಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ತೋರಿದ 5 ಜನ ಸಾಧಕರಿಗೆ ತಲಾ ಒಂದು ಲ ರೂ. ನೀಡಲು ಸಮಿತಿ ತೀರ್ಮಾನಿಸಿದೆ. ಕಲಬುರಗಿಯ ಮಾಜಿ ಕಾಮಿರ್ಕ ಸಚಿವ ಡಾ. ಎಸ್.ಕೆ. ಕಾಂತಾ, ಧಾರವಾಡದ ಖ್ಯಾತ ಮನೋವೈದ್ಯದಿವಂಗತಡಾ.ಆನಂದಪಾಂಡುರಂಗಿ,ಬೆಳಗಾವಿ ಜಿಲ್ಲೆಯ ಹಾರೂಗೇರಿಯ ಶರಣ ವಿಚಾರವಾಹಿನಿಯ ಅಧ್ಯ ಐ. ಆರ್. ಮಠಪತಿ, ಕಲಾವಿದ ಚಂದ್ರಶೇಖರ ಸೋಮಶೆಟ್ಟಿ ಅವಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

ಗದಗ ತೋಂಟದಾರ್ಯ ವಿದ್ಯಾಪಿಠಕ್ಕೆ 50 ವರ್ಷಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ ಅದರ ಸುವರ್ಣ ಮಹೋತ್ಸವದ ಅಂಗವಾಗಿ ಪಾಲಾ ಬದಾಮಿ ರಸ್ತೆಯಲ್ಲಿರುವ ಮಠದ ಜಾಗೆಯಲ್ಲಿ ನಿರ್ಮಾಣಗೊಂಡಿರುವ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸುವರ್ಣ ಸೌಧವನ್ನು ಲೋಕಾರ್ಪಣೆ ಮಾಡಲಾಗುವುದು. ಸೂಕ್ತ ಜಾಗೆಯನ್ನು ಗುರುತಿಸಿ ಶ್ರೀಗಳ 10 ಅಡಿ ಎತ್ತರದ ಕಂಚಿನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗುತ್ತದೆ ಎಂದರು. ಲಿಂಗಾಯತ ಪ್ರಗತಿಶೀಲ ಸಂದ ಅಧ್ಯ ಡಾ.ಉಮೇಶ ಪುರದ ಮಾತನಾಡಿ, ದಿ.22 ರಂದು ಮಠದಲ್ಲಿ ಜರುಗುವ ಕಾರ್ಯಕ್ರಮದ ಸಾನ್ನಿಧ್ಯವನ್ನು ತೆ-ೂಂಟದ ಸಿದ್ಧರಾಮ ಶ್ರೀಗಳು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಚಿತ್ತರಗಿಯ ಇಳಕಲ್ ವಿಜಯ ಮಹಾಂತೇಶ್ವರ ಮಠದ ವಿಜಯ ಮಹಾಂತೇಶ್ವರ ಸ್ವಾಮಿಗಳು ಹಾಗೂ ನಾಡಿನ ವಿವಿಧ ಮಠಾಧೀಶರು ಸೇರಿದಂತೆ ಅನೇಕ ಮಠಗಳ ಪೂಜ್ಯರು ಭಾಗವಹಿಸಲಿದ್ದಾರೆ. ಸಮಾರಂಭದಲ್ಲಿ ಶರಣ ಸಾಹಿತ್ಯ ಮತ್ತು ಬಸವತತ್ವಕ್ಕೆ ಸಂಬಂಧಿಸಿದ ನಾಲ್ಕು ಗ್ರಂಥಗಳನ್ನು ಬಿಡುಗಡೆ ಮಾಡಲಾಗುತ್ತದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ತೋಂಟದಾರ್ಯ ಜಾತ್ರಾ ಸಮಿತಿ ಅಧ್ಯ ವಿನಾಯಕ ಮಾನ್ವಿ, ಕೆ.ಎಸ್.ಚಟ್ಟಿ, ಶೇಖಣ್ಣ ಕವಳಿಕಾಯಿ, ಕೊಟ್ರೇಶ ಮೆಣಸಿನಕಾಯಿ, ದಾನಯ್ಯ ಗಣಾಚಾರಿ, ಅಮರೇಶ ಅಂಗಡಿ, ಶೇಖಣ್ಣ ಅರಳಿ ಹಲವರು ಇದ್ದರು.

# ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಅಗತ್ಯ: ನ್ಯಾಯಾಧೀಶ ನಾಗೇಶ ಪಾಟೀಲ್

**ಗಂಗಾವತಿ:** ಮಾನಸಿಕ ಆರೋಗ್ಯವು ಪ್ರತಿಯೊಬ್ಬರ ಜೀವನದಲ್ಲಿ ಅತ್ಯಂತ ಪ್ರಮುಖವಾಗಿದ್ದು, ಮಾನಸಿಕ ಸಮಸ್ಯೆಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಗಂಗಾವತಿ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ನ್ಯಾಯಾಧೀಶರಾದ ನಾಗೇಶ ಪಾಟೀಲ್ ಹೇಳಿದರು.

ನಗರದಶ್ರೀಕೊಲ್ಲಿನಾಗೇಶ್ವರರಾವ್‌ಸರ್ಕಾರಿಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಆಯೋಜಿಸಿದ್ದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಒತ್ತಡದ ಜೀವನಶೈಲಿ ಹಾಗೂ ವಿವಿಧ ಕಾರಣಗಳಿಂದಾಗಿ ಯುವಜನರಲ್ಲಿ ಮಾನಸಿಕ ಒತ್ತಡ ಹೆಚ್ಚಾಗುತ್ತಿದೆ. ಮಾನಸಿಕ ಸಮಸ್ಯೆಗಳನ್ನು ಮುಚ್ಚಿಡದೆ, ಅಗತ್ಯವಿದ್ದಾಗ ತಜ್ಞರ ಸಲಹೆ ಪಡೆಯಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ಕುಟುಂಬದವರು, ಸ್ನೇಹಿತರು ಹಾಗೂ ಶಿಕ್ಷಕರೊಂದಿಗೆ ಮುಕ್ತವಾಗಿ ಹಂಚಿಕೊಳ್ಳಬೇಕು. ಉತ್ತಮ ಚಿಂತನೆ, ಆರೋಗ್ಯಕರ ಜೀವನಶೈಲಿ ಹಾಗೂ ಪರಸ್ಪರ ಸಹಕಾರದ ಮೂಲಕ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ನಂತರ ಮಾತನಾಡಿದ ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರ್, ಮಾನಸಿಕ ಆರೋಗ್ಯದ ಸಮಸ್ಯೆಗಳನ್ನು ದುರ್ಬಲತೆ ಎಂದು ಭಾವಿಸದೆ, ಅವುಗಳ ಬಗ್ಗೆ ಮುಕ್ತವಾಗಿ ಮಾತನಾಡುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ತಮ್ಮ ಮಾನಸಿಕ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು. ಯಾವುದೇ ರೀತಿಯ ಒತ್ತಡ, ಆತಂಕ ಅಥವಾ ಸಮಸ್ಯೆ ಎದುರಾದಾಗ ಅದನ್ನು ಮನಸ್ಸಿನಲ್ಲಿಯೇ ಇಟ್ಟುಕೊಳ್ಳದೆ ಪೋಷಕರು, ಶಿಕ್ಷಕರು ಹಾಗೂ ಸ್ನೇಹಿತರೊಂದಿಗೆ ಹಂಚಿಕೊಳ್ಳಬೇಕು ಎಂದು ಹೇಳಿದರು.

ಸರ್ಕಾರಿ ಆಸ್ಪತ್ರೆ ತಜ್ಞರಾದ ಡಾ. ಸೋಮಶೇಖರ್ ಮಾತನಾಡಿ, ಮಾನಸಿಕ ಆರೋಗ್ಯದ ಮೇಲೆ ಒತ್ತಡ, ನಿದ್ರೆಯ ಕೊರತೆ, ಏಕಾಂತ, ನಿರಂತರ ಚಿಂತೆ ಹಾಗೂ ಜೀವನಶೈಲಿಯಲ್ಲಿನ ಬದಲಾವಣೆಗಳು ಪರಿಣಾಮ ಬೀರುತ್ತವೆ. ವಿದ್ಯಾರ್ಥಿಗಳು ತಮ್ಮಲ್ಲಾಗುವ ಮಾನಸಿಕ ಬದಲಾವಣೆಗಳನ್ನು ನಿರ್ಲಕ್ಷಿಸದೆ, ಆರಂಭದಲ್ಲಿಯೇ ಕುಟುಂಬದವರು, ಶಿಕ್ಷಕರು ಅಥವಾ ತಜ್ಞರೊಂದಿಗೆ ಚರ್ಚಿಸಬೇಕು. ಮಾನಸಿಕ ಸಮಸ್ಯೆಗಳಿಗೆ ಸೂಕ್ತ ಸಮಯದಲ್ಲಿ ಸಲಹೆ ಮತ್ತು ಚಿಕಿತ್ಸೆ ಪಡೆಯುವುದರಿಂದ ಉತ್ತಮ ಆರೋಗ್ಯಕರ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಮಂಜುನಾಥ ಶಿವಲಿಂಗಪ್ಪ, ಕಾಲೇಜು ಪ್ರಾಚಾರ್ಯರಾದ ಡಾ.ಶಿವರಾಜ ಗುರಿಕಾರ,ಗಂಗಾವತಿ ತಾಲೂಕು ವೈಧ್ಯಾಧಿಕಾರಿ ಡಾ.ಗೌರಿಶಂಕರ್ ,ಡಾ. ಸಾಯಿ ಸಾತ್ವಿಕ್,ತಾಲೂಕು ಶಿಕ್ಷಣ ಆರೋಗ್ಯಧಿಕಾರಿ ಆಶಾ ಬೇಗಂ, ಯಮನೂರು ಭಜೇಂತ್ರಿ, ಸೈಕ್ಯಾಟ್ರಿಕ್ ಸೋಶಿಯಲ್ ವರ್ಕರ್ ಉಪ ವಿಭಾಗ ಆಸ್ಪತ್ರೆ ಗಂಗಾವತಿ ಸೇರಿದಂತೆ ಇತರರು ಇದ್ದರು



# ಕಾವ್ಯಧಾರೆಗೆ ಸಾಕ್ಷಿಯಾದ ದಸರಾ ಸಂಭ್ರಮ

**ಗದಗ:** ಸಾಹಿತ್ಯವು ಸಮಾಜದ ಪ್ರತಿಬಿಂಬವಾಗಿದ್ದು, ಕವಿಗಳು ತಮ್ಮ ಬರಹಗಳ ಮೂಲಕ ಸಾಮಾಜಿಕ ಸಮಸ್ಯೆಗಳನ್ನು ಎತ್ತಿಹಿಡಿದು ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಡಿ.ಎಚ್. ಪರಂಗಿ ಹೇಳಿದರು.

ನಗರದ ಹಾತಲಗೇರಿ ನಾಕದ ಹಾಲಕೇರಿ ಮಠದ ಅನ್ನದಾನೇಶ್ವರ ಪದವಿಪೂರ್ವ ಕಾಲೇಜಿನಲ್ಲಿ ಅಕ್ಟೋಬರ್ 13ರಂದು ಎಸ್. ಎಸ್. ಆಡಿನ ಜನಸೇವಾ ಸಂಸ್ಥೆ (ರಿ.), ಹೊಳೆಆಲೂರ ಹಾಗೂ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿ, ಗದಗ ಜಿಲ್ಲಾ ಶಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ ದಸರಾ ಕಾವ್ಯೋತ್ಸವ-2026 ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯ ಗದಗ ಜಿಲ್ಲಾ ಶಾಖೆಯ ಅಧ್ಯಕ್ಷ ಬಸವರಾಜ ಎಂ. ಕಡೆಮನಿ ಅವರು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಸಮಾಜದ ವಿವಿಧ ವರ್ಗಗಳ ಜನರನ್ನು ಒಗ್ಗೂಡಿಸುವ ವೇದಿಕೆಗಳಾಗಿವೆ.ಇಂತಹಕಾರ್ಯಕ್ರಮಗಳುಹೊಸಬರಹಗಾರರಿಗೆ ಪ್ರೋತ್ಸಾಹ ನೀಡುವುದರೊಂದಿಗೆ ಕನ್ನಡ ಸಾಹಿತ್ಯದ ಬೆಳವಣಿಗೆಗೂ ಸಹಕಾರಿಯಾಗುತ್ತವೆ ಎಂದರು.

ಎಸ್.ಎಸ್. ಆಡಿನ ಜನಸೇವಾ ಸಂಸ್ಥೆಯ ರಾಜ್ಯಾಧ್ಯಕ್ಷೆ ಶೋಭಾ ಎಸ್. ಆಡಿನ ಅವರು ರೇಣುಕಾ ಮಾದರ ರಚಿಸಿದ 'ಕಣ್ಣಂಚಿನ ಕಾವ್ಯ' ಪುಸ್ತಕ ಬಿಡುಗಡೆಗೊಳಿಸಿದರು. ಪುಸ್ತಕಗಳು ಬರಹಗಾರರ ಅನುಭವ, ಭಾವನೆ ಹಾಗೂ ಚಿಂತನೆಗಳನ್ನು ಸಮಾಜದೊಂದಿಗೆ ಹಂಚಿಕೊಳ್ಳುವ ಪರಿಣಾಮಕಾರಿ ಮಾಧ್ಯಮಗಳಾಗಿವೆ ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಹೊಳೆಆಲೂರ ವಾಣಿಜ್ಯೋದ್ಯಮ ಸಂಸ್ಥೆಯ ಮಾಜಿ ಅಧ್ಯಕ್ಷ ಎಚ್. ಕೆ. ಪಟೇಲ್ ಅವರು ಮಾತೋಶ್ರೀ ಫೌಂಡೇಶನ್‌ನ ಲೋಗೊ ಅನಾವರಣಗೊಳಿಸಿ ಮಾತನಾಡಿ, ಸಂಸ್ಥೆಯ ಉದ್ದೇಶ, ಧ್ಯೇಯ ಹಾಗೂ ಸಮಾಜಮುಖಿ ಕಾರ್ಯಗಳ ಮಹತ್ವವನ್ನು ವಿವರಿಸಿದರು. ಆರೋಗ್ಯ, ಶಿಕ್ಷಣ ಮತ್ತು ಜನಕಲ್ಯಾಣಕ್ಕೆ ಆದ್ಯತೆ ನೀಡಿ, ಜನರ ಸಹಕಾರದೊಂದಿಗೆ ಸಂಸ್ಥೆಯು ತನ್ನ ಸೇವಾ ಚಟುವಟಿಕೆಗಳನ್ನು ವಿಸ್ತರಿಸಲಿ ಎಂದು ಆಶಿಸಿದರು.

ಎಸ್.ಕೆ. ಆಡಿನ ಅವರು ಪ್ರಾಸ್ತಾವಿಕ ನುಡಿ ಮಾತನಾಡಿ, ದಸರಾ ಕಾವ್ಯೋತ್ಸವದ ಉದ್ದೇಶ ಸಾಹಿತ್ಯ, ಕಲೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದಾಗಿದೆ. ಕವಿಗಳು, ಸಾಹಿತಿಗಳು ಹಾಗೂ ಕಲಾವಿದರಿಗೆ ವೇದಿಕೆ ಕಲ್ಪಿಸುವ ಮೂಲಕ ಅವರ ಪ್ರತಿಭೆಯನ್ನು ಪರಿಚಯಿಸುವ ಪ್ರಯತ್ನ ಇದಾಗಿದೆ ಎಂದರು.



ಕವಿಗೋಷ್ಠಿಯ ಆಶಯ ನುಡಿ ನೀಡಿದ ಎ.ಎಸ್. ಮಕಾನದಾರ ಅವರು ಕವಿತೆ ಬದುಕಿನ ಅನುಭವಗಳನ್ನು ಅಭಿವ್ಯಕ್ತಿಸುವ ಹಾಗೂ ಸಮಾಜದ ಸಮಸ್ಯೆಗಳ ಕುರಿತು ಚಿಂತನೆಗೆ ಹಚ್ಚುವ ಸೃಜನಶೀಲ ಪ್ರಕಾರವಾಗಿದೆ ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಆಯ್.ಕೆ. ಕಮ್ಮಾರ ಅವರು ಕವಿಗಳು ತಮ್ಮ ಸ್ವರಚಿತ ಕವನಗಳ ಮೂಲಕ ನಾಡು, ನುಡಿ, ಮಾನವೀಯತೆ ಮತ್ತು ಸಾಮಾಜಿಕ ಸಾಮರಸ್ಯದ ಸಂದೇಶಗಳನ್ನು ಸಾರಬೇಕು ಎಂದರು.ಬಂಗಾರಗುಂಡ ಗುಡದಪ್ಪ ಅವರು 'ಕಣ್ಣಂಚಿನ ಕಾವ್ಯ' ಪುಸ್ತಕದ ಪರಿಚಯ ಮಾಡಿಕೊಟ್ಟರು.

**ಸಾಧಕರಿಗೆ 'ದಸರಾ ಸಾಧಕ ರತ್ನ' ಗೌರವ:** ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಪ್ರಲ್ಹಾದ ಮುಂಡಾಸದ, ವಿನೋದ ಸಿ. ಪಟೇಲ್, ಎಂ.ಎಸ್. ಶೀಲವಂತ, ಮೀನಾಕ್ಷಿ ಶಿ. ಬೆನಕಣ್ಣವರ, ಶಕುಂತಲಾ ಎಚ್. ಅಕ್ಕಿ ಹಾಗೂ ಮಂಜುಳಾ ಚ. ಅಕ್ಕಿ ಅವರಿಗೆ 'ದಸರಾ ಸಾಧಕ ರತ್ನ' ಗೌರವ ನೀಡಿ ಸನ್ಮಾನಿಸಲಾಯಿತು.

ದಸರಾ ನಾದ-ಕುಂಚ ಸಂಭ್ರಮ ಹಾಗೂ ಕವಿಗೋಷ್ಠಿ

ರಮೇಶ ಹಾದಿಮನಿ, ಪ್ರಕಾಶ ಕಮ್ಮಾರ ಹಾಗೂ ಕಳಕೇಶ ಅರ-ಕೇರಿ ಅವರಿಂದ ದಸರಾ ನಾದ-ಕುಂಚ ಸಂಭ್ರಮ ನಡೆಯಿತು. ಕವಿಗೋಷ್ಠಿಯಲ್ಲಿ ಸುಮಾರು 35 ಕವಿಗಳು ಭಾಗವಹಿಸಿ ತಮ್ಮ ಸ್ವರಚಿತ ಕವನಗಳನ್ನು ವಾಚಿಸಿದರು.

**ಗಣ್ಯರ ಉಪಸ್ಥಿತಿ:** ಕಾರ್ಯಕ್ರಮದಲ್ಲಿ ವಿ.ವಿ. ಹಿರೇಮಠ ಮೆಮೋರಿಯಲ್ ಪ್ರತಿಷ್ಠಾನದ ಅಧ್ಯಕ್ಷೆ ವಿ.ವಿ. ಹಿರೇಮಠ, ಈಶ್ವರ ದೇವಸ್ಥಾನ ಕಮಿಟಿಯ ಅಧ್ಯಕ್ಷ ಚನ್ನಬಸಪ್ಪ ಅಕ್ಕಿ, ನಿವೃತ್ತ ಶಿಕ್ಷಕ ಕೆ.ಎಸ್. ಬಾರಕೇರ, ಮಾತೋಶ್ರೀ ಫೌಂಡೇಶನ್ ಅಧ್ಯಕ್ಷ ಸತೀಶ ಮುಂಡಾಸದ, ಆನಂದ ಸಿಂಗಾಡಿ, ಹೊಳಬಸಪ್ಪ ಅಕ್ಕಿ, ಪಿ.ಪಿ. ವಾಲ್ಮೀಕಿ, ಶಿವಾನಂದ ಕಟ್ಟಿ, ಭಾಗ್ಯ ಹುರಕಡ್ಲಿ, ರಮಾ ಚಿಗಟೇರಿ, ಚಿದಾನಂದ ಮುಂಡಾಸದ, ಮರಳುಸಿದ್ದಪ್ಪ ದೊಡ್ಡಮನಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಭೀಮಾಂಭಿಕಾ ಕಾರ್ಯಕ್ರಮ ನಿರೂಪಿಸಿದರು. ಸಾಹಿತ್ಯ, ಕಲೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಆಯೋಜಿಸಲಾದ ದಸರಾ ಕಾವ್ಯೋತ್ಸವವು ಸಾಹಿತ್ಯಾಸಕ್ತರ ಗಮನ ಸೆಳೆಯಿತು.

## ದಸರಾ ಹಬ್ಬದ ಪ್ರಯುಕ್ತ 400 ಹೆಚ್ಚುವರಿ ವಿಶೇಷ ಬಸ್‌ಗಳ ಸಂಚಾರ ಸೌಲಭ್ಯ

**ಗದಗ :** ಮಹಾನವಮಿ, ಆಯುಧಪೂಜೆ ಹಾಗೂ ದಸರಾ ಹಬ್ಬದ ಪ್ರಯುಕ್ತ ಸಾರ್ವಜನಿಕರು ತಮ್ಮ ಸ್ವಂತ ಊರುಗಳಿಗೆ ತೆರಳಲು ಅನುಕೂಲವಾಗುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ವಿವಿಧ ವಿಭಾಗಗಳಿಂದ ಸುಮಾರು 400 ಹೆಚ್ಚುವರಿ ವಿಶೇಷ ಬಸ್‌ಗಳನ್ನು ಕಾರ್ಯಾಚರಣೆಗೊಳಿಸಲು ನಿರ್ಧರಿಸಿದೆ.




ಅಕ್ಟೋಬರ್ 20ರಂದು ಮಂಗಳವಾರ ಮಹಾನವಮಿ ಹಾಗೂ ಆಯುಧಪೂಜೆ ಮತ್ತು ಅಕ್ಟೋಬರ್ 21ರಂದು ಬುಧವಾರ ವಿಜಯದಶಮಿ (ದಸರಾ) ಹಬ್ಬ ಇರುವ ಹಿನ್ನೆಲೆಯಲ್ಲಿ, ಬೆಂಗಳೂರು ಸೇರಿದಂತೆ ಇತರ ಪ್ರಮುಖ ಸ್ಥಳಗಳಿಂದ ಪ್ರಯಾಣಿಕರು ತಮ್ಮ ಊರುಗಳಿಗೆ ತೆರಳಲು ಹೆಚ್ಚುವರಿ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಸಂಸ್ಥೆಯ ವ್ಯಾಪ್ತಿಯ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಹಾಗೂ ಬಾಗಲಕೋಟೆ ವಿಭಾಗಗಳಿಂದ ಈ ವಿಶೇಷ ಬಸ್‌ಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.

ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣ, ವಿಜಯನಗರ ಟಿಟಿಎಂಸಿ, ಮಲ್ಲೇಶ್ವರಂ, ಶಾರದಾ ಕಾಲೋನಿ, ಯಶವಂತಪುರ ಟಿಟಿಎಂಸಿ ಹಾಗೂ ಬಸವೇಶ್ವರ ನಗರ ಟಿಟಿಎಂಸಿ ಬಸ್ ನಿಲ್ದಾಣಗಳಿಂದ ಸಂಸ್ಥೆಯ ವ್ಯಾಪ್ತಿಯ ವಿವಿಧ ಸ್ಥಳಗಳಿಗೆ ತೆರಳಲು ಅಕ್ಟೋಬರ್ 16 ಶುಕ್ರವಾರದಿಂದ ಅಕ್ಟೋಬರ್ 19ರ ಸೋಮವಾರದವರೆಗೆ ಹೆಚ್ಚುವರಿ ವಿಶೇಷ ಬಸ್‌ಗಳ ಸೌಲಭ್ಯ ಕಲ್ಪಿಸಲಾಗಿದೆ.

ಪ್ರಯಾಣಿಕರು ಈ ವಿಶೇಷ ಸಾರಿಗೆ ಸೌಲಭ್ಯದ ಸದುಪಯೋಗ ಪಡೆದು-ಕೊಂಡು, ಸಂಸ್ಥೆಯ ಬಸ್‌ಗಳಲ್ಲಿ ಸುಖಕರ ಹಾಗೂ ಸುರಕ್ಷಿತ ಪ್ರಯಾಣ ಕೈಗೊಳ್ಳುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಪ್ರಕಟಣೆಗೆ ತಿಳಿಸಿದೆ.

# ಜಿಲ್ಲೆಯ ನೀರಾವರಿ ಯೋಜನೆಗಳು ರೈತರ ಪಾಲಿಗೆ ಕಾಗದಕ್ಕೆ ಸೀಮಿತ

## 16 ಏತ ನೀರಾವರಿ ಯೋಜನೆಗಳಿಗೆ ತಿಂಗಳಿಗೆ 82.64 ಲಕ್ಷ ಫಿಕ್ಸ್ ಚಾರ್ಜ್ ವಿದ್ಯುತ್ ಬಿಲ್ | ವರ್ಷಕ್ಕೆ 9.91 ಕೋಟಿ ರೂ ವಿದ್ಯುತ್ ಬಿಲ್ ಹೊರೆ

ವಿಶೇಷ ವರದಿ ಹಾವೇರಿ

ಜಿಲ್ಲೆಯಲ್ಲಿ ಕೆರೆ ತುಂಬಿಸುವ ಉದ್ದೇಶದಿಂದ ಜಾರಿಗೊಳಿಸಿರುವ ಏತ ನೀರಾವರಿ ಯೋಜನೆಗಳು ಸರಕಾರದ ಬೊಕ್ಕಸಕ್ಕೆ ಮಾತ್ರ ಹೊರೆಯಾಗುತ್ತಿವೆಯೇ? ಎಂಬ ಪ್ರಶ್ನೆ ಇದೀಗ ಎದುರಾಗಿದೆ. ಜಿಲ್ಲೆಯ ವಿವಿಧೆಡೆ ಕಾರ್ಯನಿರ್ವಹಿಸುತ್ತಿರುವ 16 ಪ್ರಮುಖ ಏತ ನೀರಾವರಿ ಯೋಜನೆಗಳ ವಿದ್ಯುತ್ ಶುಲ್ಕಕ್ಕಾಗಿ ಪ್ರತಿ ತಿಂಗಳು ಫಿಕ್ಸ್ ಚಾರ್ಜ್ ರೂ.82.64 ಲಕ್ಷ ಪಾವತಿಸಲಾಗುತ್ತಿದ್ದು, ವರ್ಷಕ್ಕೆ ಬರೋಬ್ಬರಿ ರೂ.9.91 ಕೋಟಿ ವೆಚ್ಚವಾಗುತ್ತಿದೆ.

ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿರುವ ಇತರ ಯೋಜನೆಗಳ ವಿದ್ಯುತ್ ವೆಚ್ಚವನ್ನೂ ಪರಿಗಣಿಸಿದರೆ ಸರಕಾರದ ಬೊಕ್ಕಸಕ್ಕೆ ಬೀಳುತ್ತಿರುವ ಹೊರೆ ತಿಂಗಳಿಗೆ ಕೋಟಿ ದಾಟಲಿದೆ. ಆದರೆ, ಇಷ್ಟೊಂದು ಹಣ ಖರ್ಚಾಗುತ್ತಿದ್ದರೂ ಜಿಲ್ಲೆಯಲ್ಲಿ ಎಷ್ಟು ಕೆರೆಗಳು ತುಂಬಿವೆ? ಎಷ್ಟು ಎಕರೆ ಜಮೀನಿಗೆ ನೀರು ತಲುಪಿದೆ? ಎಂಬ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಮಾತ್ರ ಅಧಿಕಾರಿಗಳು ನೀಡುತ್ತಿಲ್ಲ. ಕೆಲವೇ ತಿಂಗಳು ಪಂಪ್; ವರ್ಷವಿಡೀ ವಿದ್ಯುತ್ ಬಿಲ್ ಆಣೂರು-ಬುಡಪನಹಳ್ಳಿ, ಗುಡ್ಡದಮಲ್ಲಾಪುರ, ಗುಡ್ಡದಮಾದಾಪುರ, ಬಸಾಪುರ, ಮಡ್ಲೂರು, ಸರ್ವಜ್ಞ, ಕಾಗಿನೆಲೆ, ತಿಳುವಳ್ಳಿ, ಅಸುಂಡಿ, ದೊಡ್ಡಕೆರೆ, ಬಾಳಂಬೀಡ, ಹಿರೇಕಾಂಶಿ, ದುರ್ಗಾದೇವಿ ಸೇರಿದಂತೆ 16ಕ್ಕೂ ಹೆಚ್ಚು ಯೋಜನೆಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಬಹುತೇಕ ಯೋಜನೆಗಳ ಪಂಪ್‌ಗಳು ವರ್ಷದಲ್ಲಿ ಕೆಲವೇ ತಿಂಗಳು ಕಾರ್ಯನಿರ್ವಹಿಸುತ್ತವೆ. ಉಳಿದ ಅವಧಿಯಲ್ಲಿ ನೀರೆತ್ತುವ ಕಾರ್ಯ ನಡೆಯದಿದ್ದರೂ ವಿದ್ಯುತ್ ಸಂಪರ್ಕ, ಫಿಕ್ಸ್ ಚಾ ರ್ಜ್ ಹಾಗೂ ಇತರ ಶುಲ್ಕಗಳು ಮುಂದುವರಿಯುತ್ತಿವೆ ಎಂಬುದು ರೈತರ ಆರೋಪ. ಹೀಗಾಗಿ, ನೀರು ಹರಿಯದ ಅವಧಿ ಯಲ್ಲೂ ವಿದ್ಯುತ್ ಬಿಲ್ ಏಕೆ ಮತ್ತು ಎಷ್ಟು ಪಾವತಿಸಲಾಗುತ್ತಿದೆ? ಎಂಬ ಪ್ರಶ್ನೆ ಎದುರಾಗಿದೆ.




ಬರದ ವರ್ಷದಲ್ಲಿ ಯೋಜನೆಗಳ ವೈಫಲ್ಯ ಬಯಲು:ಈ ಬಾರಿ ಮಳೆ ಕೊರತೆಯಿಂದ ಜಿಲ್ಲೆಯ ಹಲವು ಭಾಗಗಳಲ್ಲಿ ಬರದ ಪರಿಸ್ಥಿತಿ ನಿರ್ಮಾಣವಾಗಿದ್ದು, ಕೆರೆ ತುಂಬಿಸುವ ಯೋಜನೆಗಳ ಕಾರ್ಯನಿರ್ವಹಣೆಯ ಬಗ್ಗೆಯೂ ಚರ್ಚೆ ಆರಂಭವಾಗಿದೆ. ಜಿಲ್ಲೆಯಲ್ಲಿ ಸುಮಾರು 2 ಸಾವಿರ ಕೆರೆಗಳಿದ್ದು, ಈ ಪೈಕಿ ಪೂರ್ಣ ಪ್ರಮಾಣದಲ್ಲಿ ತುಂಬಿರುವ ಕೆರೆಗಳ ಸಂಖ್ಯೆ ಬೆರಳೆಣಿಕೆಯಷ್ಟಿದೆ. ಅವುಗಳಲ್ಲಿ ಹಲವು ಕೆರೆಗಳು ಯೋಜನೆಗಳ ಮೂಲಕವಲ್ಲದೆ ಮಳೆ ನೀರಿನಿಂದಲೇ ತುಂಬಿವೆ ಎಂಬುದು ಸ್ಥಳೀಯ ರೈತರ ಆರೋಪ.

> "ಬರದ ವರ್ಷಗಳಲ್ಲಿ ರೈತನ ಹೊಲಕ್ಕೆ ಒಂದು ಹನಿ ನೀರು ತಲುಪದಿದ್ದರೂ ಸರಕಾರದ ಖಜಾನೆಯಿಂದ ಪ್ರತಿ ತಿಂಗಳು ರೂ.82.64 ಲಕ್ಷ ವಿದ್ಯುತ್ ಶುಲ್ಕ ಪಾವತಿಯಾಗುತ್ತಿದ್ದರೆ, ಬಳಸಿದ ವಿದ್ಯುತ್ ಬಿಟ್ಟು ಫಿಕ್ಸ್ ಚಾರ್ಜ ವಿದ್ಯುತ್ ಮೊತ್ತವೇ ವರ್ಷಕ್ಕೆ ಸುಮಾರು ರೂ.10 ಕೋಟಿ ದಾಟುತ್ತಿದೆ. ರಾಜ್ಯದಲ್ಲಿನ ಎಲ್ಲಾ ಯೋಜನೆ ಲೆಕ್ಕ ಹಾಕಿದರೆ ಅದೇಷ್ಟು ಕೋಟಿ ಸರಕಾರಕ್ಕೆ ನಷ್ಟವಾಗುತ್ತಿದೆ ಇದಕ್ಕೆ ಹೊಣೆಗಾರರು ಯಾರು. ಇದು ಸಹ ರೈತರ ಹೆಸರಲ್ಲಿನ ಲೂಟಿಯೇ ಅಲ್ಲವೇ."
>
> | ಮಲ್ಲಿಕಾರ್ಜುನ ಬಳ್ಳಾರಿ, ರೈತ ಮುಖಂಡ

**ವಿದ್ಯುತ್ ಬಿಲ್ ಕಟ್ಟುವುದೇ ಗುರಿಯೇ?:** ಏತ ನೀರಾವರಿ ಯೋಜನೆಗಳ ಉದ್ದೇಶ ಪಂಪ್‌ಗಳನ್ನು ಅಳವಡಿಸಿ ವಿದ್ಯುತ್ ಬಿಲ್ ಪಾವ ತಿಸುವುದಲ್ಲ. ನದಿ, ಹಳ್ಳ, ಜಲಮೂಲಗಳಿಂದ ನೀರೆತ್ತಿ ಕೆರೆಗಳನ್ನು ತುಂಬಿಸಿ, ಆ ಮೂಲಕ ರೈತರಿಗೆ ನೀರಿನ ಭದ್ರತೆ ಕಲ್ಪಿಸುವುದೇ ಮೂಲ ಉದ್ದೇಶ. ಹೀಗಾಗಿ, ಯೋಜನೆ ಆರಂಭವಾದ ದಿನದಿಂದ ಇಲ್ಲಿಯವರೆಗೆ ವಿದ್ಯುತ್ ಬಳಕೆ ಎಷ್ಟು, ವಿದ್ಯುತ್ ಶುಲ್ಕಕ್ಕೆ ಎ ಷ್ಟು ಹಣ ಪಾವತಿಸಲಾಗಿದೆ, ಎಷ್ಟು ಬಾರಿ ಪಂಪ್‌ಗಳನ್ನು ಚಾಲನೆ ಮಾಡಲಾಗಿದೆ, ಎಷ್ಟು ಕೆರೆಗಳಿಗೆ ನೀರು ಹರಿಸಲಾಗಿದೆ ಹಾ ಗೂ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರೆತಿದೆ ಎಂಬ ಸಮಗ್ರ ಮಾಹಿತಿ ಸಾರ್ವಜನಿಕರಿಗೆ ಸಿಗಬೇಕಿದೆ.

**ಯೋಜನೆಗಳ 'ಪೋಸ್ಟ್‌ಮಾರ್ಟಂ' ಅಗತ್ಯ:** ಕೆರೆ ತುಂಬಿಸುವ ಯೋಜನೆಗಳ ಕುರಿತು ಸಮಗ್ರ ಆಡಿಟ್ ನಡೆಸುವ ಅಗತ್ಯವಿದೆ. ಯೋ ಜನೆ ಆರಂಭದಿಂದ ಇಲ್ಲಿಯವರೆಗೆ ಖರ್ಚಾದ ಮೊತ್ತ, ವಿದ್ಯುತ್ ಬಳಕೆ, ಪಾವತಿಸಿದ ವಿದ್ಯುತ್ ಶುಲ್ಕ, ಪಂಪ್‌ಗಳ ಕಾರ್ಯ ನಿರ್ವಹಣೆಯ ಅವಧಿ, ತುಂಬಿಸಿದ ಕೆರೆಗಳ ಸಂ-ಖ್ಯೆ ಹಾಗೂ ನೀರಾವರಿ ಸೌಲಭ್ಯ ಪಡೆದ ಜಮೀನಿನ ವಿಸ್ತೀರ್ಣದ ಸಂಪೂರ್ಣ ಲೆಕ್ಕವನ್ನು ಪರಿಶೀಲಿಸಬೇಕು. ವಿಶೇಷವಾಗಿ ಕಳೆದ 5–10 ವರ್ಷಗಳಲ್ಲಿ ವಿದ್ಯುತ್ ಶುಲ್ಕಕ್ಕೆ ಎಷ್ಟು ಹಣ ವ್ಯಯಿಸಲಾಗಿದೆ ಎಂಬು ದನ್ನು ಸಾರ್ವಜನಿಕಗೊಳಿಸಬೇಕು. ಕಡತಗಳಲ್ಲಿ ಯೋಜನೆ ಕಾರ್ಯನಿರ್ವಹಿಸುತ್ತಿದೆ ಎಂಬ ದಾಖಲೆಗಿಂತ ಕೆರೆ ದಡದಲ್ಲಿ ನೀರು ಹಾಗೂ ರೈತನ ಹೊಲದಲ್ಲಿ ಹಸಿರು ಕಾಣಿಸುವುದೇ ಯೋಜನೆಯ ಯಶಸ್ಸಿನ ನಿಜವಾದ ಮಾನದಂಡ.

ಬರದ ವರ್ಷದಲ್ಲಿ ಬಿಲ್‌ಗೆ ಕಡಿವಾಣ ಯಾವಾಗ?:ಮಳೆ ಕೈಕೊಟ್ಟಾಗ ರೈತರು ಬಿತ್ತನೆಗೆ ಹಣ ಹಾಕಿ ಆಕಾಶದತ್ತ ಮುಖ ಮಾಡು ತ್ತಾರೆ. ಇಂತಹ ಸಂದರ್ಭದಲ್ಲಿ ಕೆರೆ ತುಂಬಿಸುವ ಯೋಜನೆಗಳ ಮೂಲಕ ಒಂದು ಹನಿ ನೀರು ಕೂಡ ರೈತನ ಹೊಲಕ್ಕೆ ತಲುಪ ದಿದ್ದರೂ, ಸರಕಾರದ ಖಜಾನೆಯಿಂದ ಪ್ರತಿ ತಿಂಗಳು ರೂ.82.64 ಲಕ್ಷ ವಿದ್ಯುತ್ ಶುಲ್ಕ ಪಾವತಿಯಾಗುತ್ತಿದ್ದರೆ, ಈ ವೆಚ್ಚದ ಹೊಣೆಗಾರಿಕೆ ಮತ್ತು ಯೋಜನೆಗಳ ಕಾರ್ಯಕ್ಷಮತೆಯನ್ನು ಪರಿಶೀಲಿಸುವವರು ಯಾರು? ಎಂಬ ಪ್ರಶ್ನೆ ರೈತ ವಲಯದಲ್ಲಿ ಕೇಳಿಬರುತ್ತಿದೆ.

ಉತ್ತರ ಕರ್ನಾಟಕ ಸುದ್ದಿಗಳು
ಕನ್ನಡ ದಿನ ಪತ್ರಿಕೆ
UTTARA KARNATKA SUDDIGALU
Kannada Daily Morning



# ನಾನು ಕಂಡ ನಾನಾ ಪಾಟೇಕರ್

## ರಂಗಭೂಮಿಯ ಮಣ್ಣಿನಿಂದ ಬೆಳೆದು ಪಾತ್ರದೊಳಗೆ ಬದುಕಿದ ಅಪರೂಪದ ಕಲಾವಿದ

ಕೆಲವು ಕಲಾವಿದರನ್ನು ನಾವು ಅವರ ಅಭಿನಯದಿಂದ ನೆನಪಿಸಿಕೊಳ್ಳುತ್ತೇವೆ. ಕೆಲವರನ್ನು ಅವರ ಪಾತ್ರಗಳಿಂದ. ಇನ್ನು ಕೆಲವರನ್ನು ಅವರ ಧ್ವನಿಯಿಂದ, ಮುಖಭಾವದಿಂದ, ದೇಹಭಾಷೆಯಿಂದ. ಆದರೆ ಅಪರೂಪಕ್ಕೆ ಕೆಲವರು ಮಾತ್ರ 'ಅಭಿನಯ' ಎಂಬ ಪದಕ್ಕೇ ಒಂದು ಅರ್ಥವಾಗಿ ಉಳಿಯುತ್ತಾರೆ. ನಾನಾ ಪಾಟೇಕರ್ ಅಂತಹ ಕಲಾವಿದ. ನಾನಾ ಪಾಟೇಕರ್ ಇನ್ನಿಲ್ಲ ಎಂಬ ಸುದ್ದಿ ಕೇಳಿದಾಗ ಒಬ್ಬ ಚಿತ್ರನಟ ಅಗಲಿದ ಎಂಬ ಭಾವಕ್ಕಿಂತ, ರಂಗಭೂಮಿಯಿಂದ ಬೆಳೆದು ಬಂದ ಒಂದು ವಿಶಿಷ್ಟ ಅಭಿನಯ ಪರಂಪರೆಯ ಒಂದು ಅಧ್ಯಾಯ ಮುಗಿಯಿತು ಎಂಬ ನೋವೇ ಹೆಚ್ಚು ಕಾಡುತ್ತದೆ. ಏಕೆಂದರೆ ನಾನಾ ಅವರನ್ನು ಕೇವಲ ಬೆಳ್ಳಿತೆರೆಯ ನಟನಾಗಿ ನೋಡಲು ಸಾಧ್ಯವಿಲ್ಲ. ಅವರ ಅಭಿನಯದ ಬೇರುಗಳು ರಂಗಭೂಮಿಯ ಮಣ್ಣಿನಲ್ಲಿವೆ. ಆ ಮಣ್ಣಿನ ವಾಸನೆ ಅವರು ಎಷ್ಟೇ ದೊಡ್ಡ ಚಿತ್ರನಟನಾದರೂ ಕಳೆದುಕೊಳ್ಳಲಿಲ್ಲ. ನಾಟಕ ವಿಮರ್ಶಕನಾಗಿ ರಂಗಭೂಮಿಯನ್ನು ನೋಡುವಾಗ ನಾನು ಯಾವಾಗಲೂ ಒಂದು ಪ್ರಶ್ನೆಯನ್ನು ಕೇಳಿಕೊಳ್ಳುತ್ತೇನೆ ನಟನು ಪಾತ್ರವನ್ನು ಮಾಡುತ್ತಿದ್ದಾನೆಯೇ, ಅಥವಾ ಪಾತ್ರವೇ ನಟನನ್ನು ಆವರಿಸಿಕೊಂಡಿದೆಯೇ? ಈ ಪ್ರಶ್ನೆಗೆ ನಾನಾ ಪಾಟೇಕರ್ ಅವರ ಅಭಿನಯವೇ ಒಂದು ಉತ್ತರ. ಒಬ್ಬ ನಟ ವೇದಿಕೆಯ ಮೇಲೆ ಬಂದಾಗ ಮೊದಲಿಗೆ ನಾವು ನಟನನ್ನು ನೋಡುತ್ತೇವೆ. ಆದ-ರೆ ಅಭಿನಯ ಗಾಢವಾಗುತ್ತಾ ಹೋದಂತೆ ನಟ ಕಾಣೆಯಾಗಬೇಕು; ಪಾತ್ರ ಮಾತ್ರ ಕಾಣಬೇಕು. ನಾನಾ ಅವರ ಅಭಿನಯದಲ್ಲಿ ಈ ಮಾಯೆ ಅನೇಕ ಬಾರಿ ಸಂಭವಿಸಿದೆ. ಅವರನ್ನು ನೋಡಿದಾಗ 'ಇವರು ಅಭಿನಯಿಸುತ್ತಿದ್ದಾರೆ' ಎನ್ನುವ ಭಾವನೆಗಿಂತ 'ಈ ಮನುಷ್ಯ ನಿಜವಾಗಿಯೂ ಹೀಗೆಯೇ ಇದ್ದಾನೆ' ಎನ್ನುವ ಭಾವನೆ ಮೂಡುತ್ತಿತ್ತು. ಅದೇ ನಿಜವಾದ ಅಭಿನಯದ ಶಕ್ತಿ. ರಂಗಭೂಮಿ ನಟನಿಗೆ ಬಹಳ ಕಠಿಣ ಗುರು. ಕ್ಯಾಮೆರಾ ಮುಂದೆ ಒಂದು ದೃಶ್ಯವನ್ನು ಹಲವು ಬಾರಿ ಚಿತ್ರೀಕರಿಸಬಹುದು. ಆದರೆ ರಂಗಮಂಚದ ಮೇಲೆ ನಟನಿಗೆ ಅಂತಹ ಸೌಲಭ್ಯವಿಲ್ಲ. ಪ್ರೇಕ್ಷಕರ ಮುಂದೆ ನಿಂತ ಕ್ಷಣದಿಂದ ಅವನು ಪಾತ್ರದೊಳಗೆ ಸಂಪೂರ್ಣವಾಗಿ ಪ್ರವೇಶಿಸಬೇಕು. ಅವನ ಧ್ವನಿ, ದೇಹ, ಕಣ್ಣು, ಉಸಿರಾಟ, ಹೆಜ್ಜೆ, ಮೌನ ಎಲ್ಲವೂ ಅಭಿನಯದ ಭಾಗವಾಗಬೇಕು. ನಾನಾ ಪಾಟೇಕರ್ ಅವರ ಅಭಿನಯದಲ್ಲಿ ಈ ರಂಗಶಿಸ್ತಿನ ಛಾಪು ಸ್ಪಷ್ಟವಾಗಿ ಕಾಣುತ್ತಿತ್ತು. ಅವರ ಸಂಭಾಷಣೆ ಹೇಳುವ ಶೈಲಿಯೇ ಒಂದು ಪಾಠ. ಅವರು ಪದಗಳನ್ನು ಎಸೆಯುತ್ತಿರಲಿಲ್ಲ. ಪ್ರತಿಯೊಂದು ಪದಕ್ಕೂ ತೂಕವಿತ್ತು. ಕೆಲವೊಮ್ಮೆ ಒಂದು ಪದದ ನಂತರ ಅವರು ಕೊಡುವ ಸಣ್ಣ ವಿರಾಮವೇ ಮುಂದಿನ ಹತ್ತು ಪದಗಳಿಗಿಂತ ಹೆಚ್ಚು ಅರ್ಥವನ್ನು ನೀಡುತ್ತಿತ್ತು. ನಟನಿಗೆ ಮಾತು ಬರುವುದಷ್ಟೇ ಸಾಲದು. ಎಲ್ಲಿ ಮಾತಾಡಬೇಕು, ಎಲ್ಲಿ ಮೌನವಾಗಬೇಕು ಎಂಬುದು ಗೊತ್ತಿರಬೇಕು. ನಾನಾ ಈ ಎರಡನ್ನೂ ಬಲ್ಲವರು.

**ಕಳಚಿತು ರಂಗಭೂಮಿಯಿಂದ ಬೆಳೆದು ಬಂದ ವಿಶಿಷ್ಟ ಅಭಿನಯ ಪರಂಪರೆಯ ಅಧ್ಯಾಯದ ಕೊಂಡಿ**

ಅವರ ಕಣ್ಣುಗಳ ಬಗ್ಗೆ ಪ್ರತ್ಯೇಕವಾಗಿ ಮಾತನಾಡಲೇಬೇಕು. ಒಬ್ಬ ನಟನ ಕಣ್ಣುಗಳು ಪಾತ್ರದ ಒಳಮನಸ್ಸನ್ನು ಪ್ರೇಕ್ಷಕನಿಗೆ ತಲುಪಿಸುವ ಸಾಧನವಾಗಬಹುದು ಎಂಬುದನ್ನು ನಾನಾ ಹಲವು ಬಾರಿ ಸಾಬೀತುಪಡಿಸಿದ್ದಾರೆ. ಕೋಪವನ್ನು ಕಣ್ಣುಗಳಿಂದ ತೋರಿಸಬಹುದು. ಅಸಹಾಯಕತೆಯನ್ನು ಕಣ್ಣುಗಳಿಂದ ಹೇಳಬಹುದು. ಪ್ರೀತಿಯನ್ನು, ದ್ವೇಷವನ್ನು, ಭಯವನ್ನು, ಅನುಮಾನವನ್ನು, ನೋವನ್ನು ಎಲ್ಲವನ್ನೂ ಮಾತಿಲ್ಲದೆ ಕಣ್ಣುಗಳಿಂದ ಹೇಳಬಹುದು. ನಾನಾ ಅವರ ಕಣ್ಣುಗಳು ಅನೇಕ ಬಾರಿ ಸಂಭಾಷಣೆಯನ್ನೇ ಮೀರಿ ಮಾತನಾಡುತ್ತಿದ್ದವು. ಅವರ ಅಭಿನಯದ ಇನ್ನೊಂದು ವಿಶೇಷತೆ ಅವರು ತಮ್ಮ ಪಾತ್ರಗಳನ್ನು ಅಲಂಕರಿಸುತ್ತಿರಲಿಲ್ಲ. ಮನುಷ್ಯನನ್ನು ಅವನು ಇರುವಂತೆಯೇ ತೋರಿಸುವ ಧೈರ್ಯ ಅವರಲ್ಲಿತ್ತು. ಮನುಷ್ಯನೊಳಗೆ ಬೆಳಕಿದೆ; ಅದೇ ಸಮಯದಲ್ಲಿ ಕತ್ತಲೆಯೂ ಇದೆ. ಪ್ರೀತಿ ಇದೆ; ದ್ವೇಷವೂ ಇದೆ. ಕರುಣೆ ಇದೆ; ಕ್ರೌರ್ಯವೂ ಇದೆ. ದುರ್ಬಲತೆ ಇದೆ; ಅಹಂಕಾರವೂ ಇದೆ. ನಾನಾ ಪಾತ್ರದ ಈ ಎರಡೂ ಮುಖಗಳನ್ನು ಹಿಡಿಯುತ್ತಿದ್ದರು. ಅದಕ್ಕಾಗಿಯೇ ಅವರ ಖಳಪಾತ್ರಗಳೂ ನೆನಪಿನಲ್ಲಿ ಉಳಿಯುತ್ತವೆ. ಅವರು ಖಳನಾಯಕನನ್ನು ಕೇವಲ ಕೆಟ್ಟ ಮನುಷ್ಯನಾಗಿ ತೋರಿಸಲಿಲ್ಲ. ಅವನ ಮನಸ್ಸಿನ ಕತ್ತಲನ್ನು ಪ್ರೇಕ್ಷಕನ ಮುಂದೆ ತೆರೆದಿಟ್ಟರು. ಪ್ರೇಕ್ಷಕ ಆ ಪಾತ್ರವನ್ನು ಇಷ್ಟಪಡದಿದ್ದರೂ, ಅದನ್ನು ನಂಬುವಂತೆ ಮಾಡಿದರು. ಇದು ನಟನ ದೊಡ್ಡ ಗೆಲುವು. 'ಕ್ರಾಂತಿವೀರ'ನಂತಹ ಪಾತ್ರಗಳಲ್ಲಿ ಅವರ ಕೋಪ ಕೇವಲ ಅಭಿನಯವಾಗಿರಲಿಲ್ಲ. ಅದು ವ್ಯವಸ್ಥೆಯ ವಿರುದ್ಧದ ಸಾಮಾನ್ಯ ಮನುಷ್ಯನ ಆಕ್ರೋಶದಂತೆ ಕಾಣುತ್ತಿತ್ತು. 'ಪ್ರಹಾರ್'ನಲ್ಲಿ ಶಿಸ್ತು ಮತ್ತು ಸೈನಿಕ ಮನೋಭಾವದ ಗಂಭೀರತೆಯನ್ನು ಅವರು ದೇಹಭಾಷೆಯಲ್ಲೇ ಕಟ್ಟಿಕೊಟ್ಟರು. 'ಪರಿಂದಾ'ಯಲ್ಲಿ ಅವರ ಪಾತ್ರದ ಕರಾಳತೆಯು ಪ್ರೇಕ್ಷಕರನ್ನು ಅಸ್ವಸ್ಥಗೊಳಿಸುವಷ್ಟು ನೈಜವಾಗಿತ್ತು. 'ಅಬ್ ತಕ್ ಛಪ್ಪನ್'ನಲ್ಲಿ ಪೊಲೀಸ್ ಅಧಿಕಾರಿಯ ಒಳಗಿನ ಒತ್ತಡ ಮತ್ತು ಕಠಿಣತೆಯನ್ನು ಅವರು ತಮ್ಮದೇ ಆದ ರೀತಿಯಲ್ಲಿ ರೂಪಿಸಿದರು. ಆದರೆ ಇದೇ ನಟ 'ವೆಲ್ಕಮ್'ನಲ್ಲಿ ಪ್ರೇಕ್ಷಕರನ್ನು ನಗಿಸುತ್ತಾನೆ.ಇದು ನಾನಾ ಅವರ ಅಭಿನಯದ ವ್ಯಾಪ್ತಿ. ಒಬ್ಬ ನಟ ಗಂಭೀರ ಪಾತ್ರಗಳಲ್ಲಿ ಉತ್ತಮವಾಗಿರಬಹುದು. ಮತ್ತೊಬ್ಬ ಹಾಸ್ಯದಲ್ಲಿ ಪರಿಣತನಾಗಿರಬಹುದು. ಆದರೆ ಗಂಭೀರತೆಯಿಂದ ಹಾಸ್ಯಕ್ಕೆ, ಕ್ರೌರ್ಯದಿಂದ ಕರುಣೆಗೆ, ಆಕ್ರೋಶದಿಂದ ಅಸಹಾಯಕತೆಗೆ, ಅಧಿಕಾರದಿಂದ ಸಾಮಾನ್ಯ ಮನುಷ್ಯನಿಗೆ ಇಷ್ಟೊಂದು ಸುಲಭವಾಗಿ ಸಾಗಬಲ್ಲ ನಟ ಅಪರೂಪ. ನನ್ನ ದೃಷ್ಟಿಯಲ್ಲಿ ನಾನಾ ಪಾಟೇಕರ್ ಅವರ ಶ್ರೇಷ್ಠತೆಯನ್ನು ಅವರ ಪ್ರಶಸ್ತಿಗಳ ಪಟ್ಟಿಯಲ್ಲಿ ಹುಡುಕಬಾರದು. ಅವರು ಪಡೆದ ರಾಷ್ಟ್ರೀಯ ಪ್ರಶಸ್ತಿಗಳು, ಗೌರವಗಳು ಅವರ ಪ್ರತಿಭೆಗೆ ಮಾನ್ಯತೆ ನೀಡಿವೆ. ಆದರೆ ಕಲಾವಿದನ ನಿಜವಾದ ಪ್ರಶಸ್ತಿ ಪ್ರೇಕ್ಷಕನ ಮನಸ್ಸಿನಲ್ಲಿ ಅವನು ಬಿಟ್ಟುಹೋಗುವ ಗುರುತು. ನಾನಾ ಆ ಗುರುತನ್ನು ಬಿಟ್ಟಿದ್ದಾ-ರೆ. ಅವರ ಅಭಿನಯವನ್ನು ನೋಡಿದ ನಂತರ ಪಾತ್ರ ನಮ್ಮನ್ನು ಬಿಡುವುದಿಲ್ಲ. ಚಿತ್ರ ಮುಗಿದರೂ ಪಾತ್ರ ನಮ್ಮೊಳಗೆ ಉಳಿಯುತ್ತದೆ. ಕೆಲವು ದಿನಗಳ ನಂತರವೂ ಯಾವುದೋ ದೃಶ್ಯ ನೆನಪಾಗುತ್ತದೆ. ಯಾವುದೋ ಸಂಭಾಷಣೆ ಕಿವಿಯಲ್ಲಿ ಕೇಳಿಸುತ್ತದೆ. ಯಾವುದೋ ಕಣ್ಣು ನಮ್ಮನ್ನು ಪ್ರಶ್ನಿಸಿದಂತೆ ಭಾಸವಾಗುತ್ತದೆ. ಇದೇ ಕಲೆಯ ಶಕ್ತಿ. ಇದೇ ನಾನಾ ಪಾಟೇಕರ್ ಅವರ ಶಕ್ತಿ. ಅವರ ಬಗ್ಗೆ ಮಾತನಾಡುವಾಗ 'ನಟಸಮ್ರಾಟ್' ವನ್ನು ಮರೆಯಲು ಸಾಧ್ಯವಿಲ್ಲ. ವಯಸ್ಸಾದ ರಂಗನಟನೊಬ್ಬ ಜೀವನದ ಕೊನೆಯ ಹಂತದಲ್ಲಿ ಅನುಭವಿಸುವ ಒಂಟಿತನ, ಕುಟುಂಬದಿಂದ ದೂರವಾಗುವ ನೋವು, ಕಲಾವಿದನ ಆತ್ಮಗೌರವ, ವೇದಿಕೆಯಲ್ಲಿ ಪಡೆದ ಗೌರವ ಮತ್ತು ವೈಯಕ್ತಿಕ ಬದುಕಿನ ನಿರ್ಲಕ್ಷ್ಯಇವೆಲ್ಲವನ್ನೂ ನಾನಾ ಜೀವಂತಗೊಳಿಸಿದರು. 'ನಟಸಮ್ರಾಟ್'ನ ಪಾತ್ರವನ್ನು ನೋಡಿದಾಗ ನನಗೆ ಮತ್ತೆ ಮತ್ತೆ ಒಂದು ವಿಚಾರ ನೆನಪಾಗುತ್ತದೆ. ರಂಗಭೂಮಿ ಕಲಾವಿದನಿಗೆ ವೇದಿಕೆ ಕೇವಲ ಪ್ರದರ್ಶನದ ಜಾಗವಲ್ಲ; ಅದು ಅವನ ಬದುಕಿನ ಒಂದು ಭಾಗ. ಅದಕ್ಕಾಗಿಯೇ ವೇದಿಕೆಯಿಂದ ಕೆಳಗಿಳಿದ ನಂತರ ಅವನು ಸಾಮಾನ್ಯ ಮನುಷ್ಯನಾಗುವುದು ಸುಲಭವಲ್ಲ.

ಕಲಾವಿದನನ್ನು ಸಮಾಜ ಚಪ್ಪಾಳೆಯಿಂದ ಸ್ವಾಗತಿಸುತ್ತದೆ. ಆದರೆ ಅದೇ ಕಲಾವಿದನ ವಯಸ್ಸಾದಾಗ ಅವನ ಕೈ ಹಿಡಿಯಲು ಎಷ್ಟು ಮಂದಿ ಮುಂದೆ ಬರುತ್ತಾರೆ? ಅವನು ಬೆಳಗಿದ್ದಾಗ ಅವನ ಸುತ್ತಲೂ ಇರುವ ಜನರು, ಬೆಳಕು ಕಡಿಮೆಯಾದಾಗ ಎಷ್ಟು ಮಂದಿ ಉಳಿಯುತ್ತಾರೆ? 'ನಟಸಮ್ರಾಟ್' ಈ ಪ್ರಶ್ನೆಯನ್ನು ಕೇಳುತ್ತದೆ. ನಾನಾ ಅವರ ಅಭಿನಯ ಆ ಪ್ರಶ್ನೆಗೆ ನೋವಿನ ರೂಪ ನೀಡುತ್ತದೆ. ಇಲ್ಲಿ ನಾನಾ ಮತ್ತು ಪಾತ್ರದ ನಡುವೆ ಇರುವ ಗಡಿ ಬಹಳ ತೆಳುವಾಗುತ್ತದೆ. ಅವರ ರಂಗಭೂಮಿಯ ಹಿನ್ನೆಲೆ ಈ ಪಾತ್ರಕ್ಕೆ ಮತ್ತಷ್ಟು ಆಳ ನೀಡುತ್ತದೆ. ವೇದಿಕೆಯ ಮೇಲಿನ ನಟನಿಗೆ ಪ್ರೇಕ್ಷಕನ ಚಪ್ಪಾಳೆ ಬದುಕಿನ ಉಸಿರಿನಂತಿರುತ್ತದೆ. ಆದರೆ ಚಪ್ಪಾಳೆ ನಿಂತ ನಂತರ? ಬೆಳಕು ಆರಿದ ನಂತರ? ಪ್ರೇಕ್ಷಕರು ಮನೆಗೆ ಹೋದ ನಂತರ? ಉಳಿಯುವುದು ನಟನ ಒಂಟಿತನ. ಈ ಮನಸ್ಥಿತಿಯನ್ನು ಅರ್ಥಮಾಡಿಕೊಂಡ ನಟನೇ 'ನಟಸಮ್ರಾಟ್'ನ ನೋವನ್ನು ಅಷ್ಟು ಆಳವಾಗಿ ತಲುಪಿಸಬಲ್ಲ. ನಾನಾ ಪಾಟೇಕರ್ ಅವರ ಅಭಿನಯವನ್ನು ನೋಡುತ್ತಾ ನನಗೆ ಯಾವಾಗಲೂ ಒಂದು ಸಂಗತಿ ಅನಿಸುತ್ತಿತ್ತು. ಅವರು ಪಾತ್ರದ ಹೊರಗಿನಿಂದ ಪಾತ್ರವನ್ನು ನೋಡುತ್ತಿರಲಿಲ್ಲ; ಪಾತ್ರದ ಒಳಗಿನಿಂದ ಜಗತ್ತನ್ನು ನೋಡುತ್ತಿದ್ದರು. ಇದೇ ಅವರ ದೊಡ್ಡ ಶಕ್ತಿ. ಇಂದಿನ ತಲೆಮಾರಿನ ನಟರಿಗೆ ನಾನಾ ಪಾಟೇಕರ್ ಅವರ ಬದುಕು ಒಂದು ದೊಡ್ಡ ಪಾಠಶಾಲೆ. ಸಾಮಾಜಿಕ ಮಾಧ್ಯಮದ ಕಾಲದಲ್ಲಿ ಒಂದು ವಿಡಿಯೊ, ಒಂದು ಮುಖಭಾವ, ಒಂದು ಸಂಭಾಷಣೆ ವೈರಲ್ ಆದ ಕೂಡಲೇ ಜನಪ್ರಿಯತೆ ಸಿಗಬಹುದು. ಆದರೆ ಜನಪ್ರಿಯತೆ ಮತ್ತು ಅಭಿನಯ ಒಂದೇ ಅಲ್ಲ. ಅಭಿನಯಕ್ಕೆ ತಾಲೀಮು ಬೇಕು. ಓದು ಬೇಕು, ಮನುಷ್ಯರನ್ನು ಗಮನಿಸುವ ಕಣ್ಣು ಬೇಕು, ಜೀವನದ ನೋವು ನಲಿವುಗಳನ್ನು ಅನುಭವಿಸುವ ಮನಸ್ಸು ಬೇಕು, ಪಾತ್ರದೊಳಗೆ ಇಳಿಯುವ ತಾಳ್ಮೆ ಬೇಕು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ತನ್ನನ್ನೇ ಮರೆತು ಪಾತ್ರವಾಗುವ ಸಾಮರ್ಥ್ಯ ಬೇಕು. ನಾನಾ ಪಾಟೇಕರ್ ಈ ಎಲ್ಲದರ ಸಂಗಮ. ಅವರ ನಿಧನದ ಸಂದರ್ಭದಲ್ಲಿ ನಾವು ಒಬ್ಬ ಜನಪ್ರಿಯ ನಟನನ್ನು ಮಾತ್ರ ಸ್ಮರಿಸಿದರೆ ಅದು ಅವರಿಗೆ ಮಾಡುವ ಅಪೂರ್ಣ ಗೌರವ. ನಾವು ನೆನಪಿಸಿಕೊಳ್ಳಬೇಕಾದದ್ದು ಅವರ ಕಲಾ ಪಯಣವನ್ನು. ರಂಗಭೂಮಿಯೊಂದಿಗೆ ಇದ್ದ ಅವರ ನಂಟನ್ನು. ಪಾತ್ರದ ಮೇಲಿನ ಅವರ ಬದ್ಧತೆಯನ್ನು. ಸಂಭಾಷಣೆಯ ಮೇಲಿನ ಅವರ ಹಿಡಿತವನ್ನು. ಮೌನವನ್ನು ಅಭಿನಯವನ್ನಾಗಿ ಪರಿವರ್ತಿಸಿದ ಅವರ ಸಾಮರ್ಥ್ಯವನ್ನು.

ರಂಗಭೂಮಿ ಎಂದಿಗೂ ಸುಳ್ಳನ್ನು ಕ್ಷಮಿಸುವುದಿಲ್ಲ. ನಟ ಸುಳ್ಳು ಹೇಳಿದರೆ ಪ್ರೇಕ್ಷಕ ಅದನ್ನು ಗುರುತಿಸುತ್ತಾನೆ. ನಾನಾ ಅವರ ಅಭಿನಯದಲ್ಲಿ ಈ 'ಸತ್ಯ' ಇತ್ತು. ಅವರು ಪಾತ್ರವನ್ನು ತೋರಿಸಲಿಲ್ಲ. ಪಾತ್ರದ ಸತ್ಯವನ್ನು ತೋರಿಸಿದರು. ಅದಕ್ಕಾಗಿಯೇ ಅವರು ಹೋದರೂ ಅವರ ಅಭಿನಯ ಹೋಗುವುದಿಲ್ಲ. ರಂಗಭೂಮಿಯ ಪರದೆ ಮತ್ತೆ ಮತ್ತೆ ಮೇಲೇಳುತ್ತದೆ. ಹೊಸ ನಟರು ವೇದಿಕೆಯ ಮೇಲೆ ಬರುತ್ತಾರೆ. ಹೊಸ ಪಾತ್ರಗಳು ಹುಟ್ಟುತ್ತವೆ.ಹೊಸ ಕಥೆಗಳು ಹೇಳಲ್ಪಡುತ್ತವೆ.ಆದರೆ ಒಬ್ಬ ನಟನ ನಿಜವಾದ ಕಲಾ ಪರಂಪರೆ ಮುಂದಿನ ಪೀಳಿಗೆಯ ನಟರ ಅಭಿನಯದಲ್ಲಿ ಬದುಕುತ್ತದೆ. ಯಾರಾದರೂ ಯುವ ನಟ ವೇದಿಕೆಯ ಮೇಲೆ ನಿಂತು ಸಂಭಾಷಣೆಯನ್ನು ಜೋರಾಗಿ ಹೇಳುವುದಕ್ಕಿಂತ ಮೊದಲು ಅದರ ಅರ್ಥವನ್ನು ಹುಡುಕಿದರೆ ಅಲ್ಲಿ ನಾನಾ ಇದ್ದಾರೆ. ಯಾರಾದರೂ ನಟ ಕೋಪವನ್ನು ಕೂಗುವುದರ ಬದಲು ಕಣ್ಣಿನಲ್ಲಿ ತೋರಿಸಿದರೆ ಅಲ್ಲಿ ನಾನಾ ಇದ್ದಾರೆ. ಯಾರಾದರೂ ನಟ ಮೌನಕ್ಕೂ ಸಂಭಾಷಣೆಯಷ್ಟೇ ಮಹತ್ವವಿದೆ ಎಂದು ಅರಿತರೆ ಅಲ್ಲಿ ನಾನಾ ಇದ್ದಾರೆ. ಯಾರಾದರೂ ನಟ ಪಾತ್ರ ದೊಡ್ಡದೋ ಚಿಕ್ಕದೋ ಎಂದು ನೋಡದೆ ಅದನ್ನು ಪ್ರಾಮಾಣಿಕವಾಗಿ ಬದುಕಿದರೆ ಅಲ್ಲಿ ನಾನಾ ಇದ್ದಾರೆ. ಆದ್ದ-ರಿಂದ ನಾನಾ ಪಾಟೇಕರ್ ಅವರ ನಿಧನವನ್ನು ಕೇವಲ ಒಂದು ಕಲಾವಿದನ ಅಂತ್ಯ ಎಂದು ನೋಡುವ ಅಗತ್ಯವಿಲ್ಲ. ಅದು ಒಂದು ನೆನಪಿನ ಆರಂಭ. ನಾನಾ ಪಾಟೇಕರ್ ಇನ್ನಿಲ್ಲ. ಆದರೆ ಅವರು ನಮಗೆ ಬಿಟ್ಟುಹೋದದ್ದು ಕೇವಲ ಕೆಲವು ಸಿನಿಮಾಗಳಲ್ಲ. ಒಂದು ಧ್ವನಿ, ಒಂದು ದೃಷ್ಟಿ, ಒಂದು ದೇಹಭಾಷೆ, ಒಂದು ರಂಗಸಂಸ್ಕಾರ, ಒಂದು ಅಭಿನಯದ ಶಿಸ್ತು ಮತ್ತು ಮುಖ್ಯವಾಗಿ ಪಾತ್ರವನ್ನು ಪ್ರೀತಿಸಿದರೆ ಮಾತ್ರ ಅಭಿನಯ ಹುಟ್ಟುತ್ತದೆ ಎಂಬ ಅಮೂಲ್ಯ ಪಾಠ. ನಟ-ರು ಬರುತ್ತಾರೆ, ಹೋಗುತ್ತಾರೆ. ತಾರೆಗಳು ಹುಟ್ಟುತ್ತಾರೆ, ಮರೆಯಾಗುತ್ತಾರೆ. ಆದರೆ ಕೆಲವರು ಮಾತ್ರ ಕಲೆಯ ಇತಿಹಾಸದಲ್ಲಿ ತಮ್ಮದೇ ಆದ ಒಂದು ಗುರುತು ಬಿಡುತ್ತಾರೆ. ನಾನಾ ಪಾಟೇಕರ್ ಅಂತಹವರು. ಅವರು ಇನ್ನಿಲ್ಲ; ಆದರೆ ಅವರ ಪಾತ್ರಗಳು ಇನ್ನೂ ಮಾತನಾಡುತ್ತಿವೆ. ಅವರ ಧ್ವನಿ ಇನ್ನೂ ಮೊಳಗುತ್ತಿದೆ. ಅವರ ಕಣ್ಣುಗಳು ಇನ್ನೂ ಪ್ರಶ್ನಿಸುತ್ತಿವೆ. ರಂಗಭೂಮಿಯ ಬೆಳಕು ಇರುವವರೆಗೂ ನಾನಾ ಪಾಟೇಕರ್ ಎಂಬ ನಟ ನಮ್ಮೊಂದಿಗೇ ಇರುತ್ತಾರೆ. ಅವರು ನೆನಪು ಮಾತ್ರವಲ್ಲ; ಅವರು ಅಭಿನಯದ ಒಂದು ಮಾನದಂಡ.





ಅನಂತ ಪಪ್ಪು,
ಬೆಳಗಾವಿ
ಮೋ:9448527870



ಗಜೇಂದ್ರಗಡಕ್ಕೆ ಎನ್‌ಡಿಎ ಪಶ್ಚಿಮ ಪದವೀಧರ ಅಭ್ಯರ್ಥಿ ಎಸ್ ವಿ ಸಂಕನೂರು ಅವರ ಪರವಾಗಿ ಇಂದು ಶ್ರೀ ಎಚ್ ಆರ್ ನಿರಾಣಿ ಮತ್ತು ಜೆಡಿಎಸ್ ಪಕ್ಷದ ಜಿಲ್ಲಾಧ್ಯಕ್ಷರು ಶ್ರೀ ಎಮ್ ವೈ ಮುಧೋಳ್ (ಸಾಗರ್ ) ಬಿಜೆಪಿ ಪಕ್ಷದ ಬ್ಲಾಕ್ ಅಧ್ಯಕ್ಷರಾದಂತ ಶ್ರೀ ಉಮೇಶ್ ಮಲ್ಲಾಪುರ್ ಹಾಗೂ ಅಶೋಕ್ ವನ್ನಾಲ್ ಆರ್ ಕೆ ಚವಾಣ್ ಬಸವರಾಜ್ ಬಂಕದ ಮತ್ತು ಸಂಗಪ್ಪ ಯಲಬುಚ್ಚಿ ಭಾಷಾ ಸಾಬ್ ಭಾಗವಾನ್ ಹಾಗೂ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಪದಾಧಿಕಾರಿಗಳು ಶ್ರೀ ಎಸ್ ವಿ ಸಂಕನೂರ್ ಇವರ ಪರವಾಗಿ ಗಜೇಂದ್ರಗಡ ತಾಲೂಕು ಘಟಕದಲ್ಲಿ ಪ್ರಚಾರ ಮಾಡಿದರು.

## ಅನಗವಾಡಿ ನಬಿ ನದಾಫ್ ಅವರಿಗೆ ಕುಂದರಗಿ ಜಿಲ್ಲಾ ಪಂಚಾಯತ್ ಟಿಕೆಟ್ ನೀಡಲಿ



**ಬಾಗಲಕೋಟೆ:** ಭಾರತೀಯ ಜನತಾ ಪಾರ್ಟಿಯ ಅಲ್ಪಸಂಖ್ಯಾತರ ಮೋರ್ಚಾದ ಪ್ರಬಲ ಸಾಮಾಜಿಕ ಮುಖಂಡ ಹಾಗೂ ಹಿಂದೂ ಮುಸಲ್ಮಾನಭಾವೈಕ್ಯತೆಯಜನನಾಯಕ ಅತ್ಯಂತ ಕಡುಬಡತನದಲ್ಲಿ ಹುಟ್ಟಿ ಬೆಳೆದು ಕಷ್ಟದ ಪರಿಸ್ಥಿತಿಯಲ್ಲಿ ಕಳೆದ 27 ವರ್ಷಗಳಿಂದ ಸಂಘ ಪರಿವಾರ ಪರಿಹಾರ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರಾಗಿ ಹಾಗೂ ವಿದ್ಯಾರ್ಥಿ ಪರಿಷತ್ತು ಭಾರತೀಯ ಆರು ವರ್ಷಗಳ ಕಾಲ ತಮ್ಮ ಶಿಕ್ಷಣದ ನಂತರ ಪೂರ್ಣಾವಧಿ ಕಾರ್ಯಕರ್ತಾಗಿ ಅನನ್ಯ ಯಶಸ್ವಿ ಸಂಘಟನಾತ್ಮಕ ಜವಾಬ್ದಾರಿಗಳನ್ನು ನಿರ್ವಹಿಸಿ ಪ್ರಸ್ತುತ ಕಳೆದ 10 ವರ್ಷಗಳಿಂದ ಭಾರತೀಯ ಜನತಾ ಪಾರ್ಟಿಯ ಸಕ್ರಿಯೆ ಕಾರ್ಯಕರ್ತರಾಗಿ ಅನೇಕ ಹೋರಾಟದಲ್ಲಿ ಮುಂಚಿನಲಿ ನಿಂತು ಯಶಸ್ವಿ ಆದಂತಹ ಯುವ ನಾಯಕ, ಸಾಮಾಜಿಕ ವಿವಿಧ ಕ್ಷೇತ್ರದಲ್ಲಿ ಜನಮನ್ನಣೆ ಗಳಿಸಿದೆ ನಾಯಕರಾದ ಶ್ರೀ ಅನಗವಾಡಿ ನಬಿ ಮ ನದಾಫ್ ಅವರಿಗೆ ಮುಂಬರುವ ಕುಂದರಗಿ ಜಿಲ್ಲಾ ಪಂಚಾಯತ್ ಪ್ರಬಲ ಸೇವಾ ಆಕಾಂಕ್ಷಿ ಆಗಿದ್ದು ಅವರಿಗೆ ಈ ಸಲ ಟಿಕೆಟ್ ನೀಡಬೇಕೆಂದು ಬಾಗಲಕೋಟ್ ಜಿಲ್ಲೆಯ ಬೀಳಗಿ ಮತಕ್ಷೇತ್ರದ ಶಕ್ತಿ ಕೇಂದ್ರವಾದಕುಂದರಗಿಜಿಲ್ಲಾಪಂಚಾಯತ್‌ಕ್ಷೇತ್ರದಿಂದ ಹಿಂದುಳಿದ ವರ್ಗ ಬ ಮೀಸಲಾತಿಯಲ್ಲಿ ಅವರ ಪಕ್ಷ ನಿಷ್ಠೆ ಹಾಗೂ ಸಾಮಾಜಿಕ ಬದ್ಧತೆ, ರಾಷ್ಟ್ರೀಯತೆ ಚಿಂತನೆ ಅವರ ಸೇವಾ ಕಾರ್ಯವನ್ನು ಪರಿಗಣಿಸಿ ಮಾಜಿ ಸಚಿವರಾದ ಡಾ. ಮುರುಗೇಶ್ ಆರ್ ನಿರಾಣಿ ಹಾಗೂ ವಿಧಾನ ಪರಿಷತ್ ಸದಸ್ಯರಾದ ಹನುಮಂತ ನಿರಾಣಿ ಬಾಗಲಕೋಟ ಜಿಲ್ಲಾ ಅಧ್ಯಕ್ಷರಾದ ಶಾಂತಗೌಡ ಪಾಟೀಲ್ ಜಿಲ್ಲೆಯ ಎಲ್ಲ ಹಾಲಿ ಶಾಸಕರು ಹಾಗೂ ಮಾಜಿ ಶಾಸಕರು ಸಂಘಟನೆ ಹಿರಿಯರು ಸಂಘದ ಹಿತೈಷಿಗಳು ಹಾಗೂ ರಾಜ್ಯ ನಾಯಕರ ಪಕ್ಷದ ಸಂಘಟನೆ ಇವರಿಗೆ ಟಿಕೆಟ್ ನೀಡಬೇಕೆಂದು ಎಲ್ಲಾ ವಿಶೇಷವಾಗಿ ಮುಸ್ಲಿಂ ಸಮಾಜದ ಹಿರಿಯರು ಯುವಕರು ಹಾಗೂ ಹಿಂದೂ ಸಮಾಜದ ಎಲ್ಲಾ ಬಂಧುಗಳು ಆಗ್ರಿಸಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಭಾರತೀಯ ಜನತಾ ಪಾರ್ಟಿಯ ಅಲ್ಪಸಂಖ್ಯಾತರ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಹುಸೇನ್ ಮುಲ್ಲಾ ಮುನ್ನಾ ಚಿಕ್ಕಾಲಗುಕಡಿ ಅವರು ಆಗ್ರಹಿಸಿದ್ದಾರೆ ಪತ್ರಿಕಾಗೋಷ್ಠಿಯಲ್ಲಿ ಅಲ್ಪಸಂಖ್ಯಾತರ ಮೋರ್ಚಾದ ಜಿಲ್ಲಾ ಅಧ್ಯಕ್ಷರಾದ ರಹಿಮಾನ್ ಸಾಬ್ ಮಂಕಾದಾರ ಅಬ್ದುಲ್ ಕಾನ್ ಪಠಾಣ್ ಸಾಹೇಬಲಾಲ ನದಾಫ್ ಮುನ್ನಾ ಬಾಗವಾನ್ ಹುನುಗುಂದ್ ನಾಶಿರ ಹುಸೇನ್ ಕಾಜಿ ಬಷೀರ್ ಅಹಮದ್ ಹುಸೇನ್ ರಾಜ್ವಾಲ್ ನಾಯ್ಕೋಡಿ ಸಂಗಮೇಶ್ ಹೂಗಾರ ಅಶೋಕ್ ಕುಮಾರ್ ಮಾದಯ್ಯ ಅನೇಕ ಜನ ಉಪಸ್ಥಿತರಿದ್ದರು

## ಪೋಕ್ಸೊ ಪ್ರಕರಣದಲ್ಲಿ ಆರೋಪಿಗೆ 20 ವರ್ಷ ಜೈಲು ಶಿಕ್ಷೆ, 50 ಸಾವಿರ ರೂ. ದಂಡ

**ಗದಗ:** ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದಲ್ಲಿ ಆರೋಪಿಗೆ 20 ವರ್ಷಗಳ ಜೈಲು ಶಿಕ್ಷೆ ಹಾಗೂ 50,000 ದಂಡ ವಿಧಿಸಿ ಗದಗ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ಪ್ರಕಟಿಸಿದೆ. ಗದಗ ಜಿಲ್ಲೆಯ ಶಿಗ್ಲಿ ಗ್ರಾಮದ ಹಾಲಿ ಬೆಟಗೇರಿಯ ಮಂಜುನಾಥನಗರ ನಿವಾಸಿ ನಾರಾಯಣಪ್ಪ ತಂದೆ ಸಿದ್ದಪ್ಪ ಪೂಜಾರ ಎಂಬಾತನೇ ಶಿಕ್ಷೆಗೆ ಗುರಿಯಾದ ಆರೋಪಿ.



ಆರೋಪಿಯು ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಕುರಿತು ಗದಗ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಹಿನ್ನೆಲೆಯಲ್ಲಿ ಪೊಲೀಸರು ಆರೋಪಿಯನ್ನು ದಿನಾಂಕ 29-01-2023ರಂದು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ಪ್ರಕರಣದ ತನಿಖಾಧಿಕಾರಿಗಳಾದ ಗದಗ ಮಹಿಳಾ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಪ್ರದೀಪ ಎಸ್. ಬಿಸೆ ಅವರು ತನಿಖೆ ಕೈಗೊಂಡು, ತನಿಖೆ ಪೂರ್ಣಗೊಳಿಸಿದ ನಂತರ ದಿನಾಂಕ 13-03-2023ರಂದು ನ್ಯಾಯಾಲಯಕ್ಕೆ ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಗದಗ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಎಸ್‌ಸಿ ನಂ. 30/2023ರ ಅಡಿಯಲ್ಲಿ ಪ್ರಕರಣದ ವಿಚಾರಣೆ ನಡೆಯಿತು. ವಿಚಾರಣೆ ಪೂರ್ಣಗೊಂಡ ಬಳಿಕ ಮಾನ್ಯ ನ್ಯಾಯಾಧೀಶರಾದ ಗೀತಾ ಶಿಂಧೆ ಅವರು ದಿನಾಂಕ 12-10-2026ರಂದು ತೀರ್ಪು ಪ್ರಕಟಿಸಿ, ಆರೋಪಿಗೆ 20 ವರ್ಷಗಳ ಜೈಲು ಶಿಕ್ಷೆ ಹಾಗೂ 50,000 ದಂಡ ವಿಧಿಸಿದ್ದಾರೆ. ಪ್ರಕರಣದಲ್ಲಿ ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ ಅಮರೇಶ ಹಿರೇಮಠ ಅವರು ವಾದ ಮಂಡಿಸಿದ್ದರು. ಪ್ರಕರಣವನ್ನು ತ್ವರಿತವಾಗಿ ಪತ್ತೆಹಚ್ಚಿ, ಅಗತ್ಯ ಕಾನೂನು ಕ್ರಮ ಕೈಗೊಂಡ ತನಿಖಾಧಿಕಾರಿಗಳು ಹಾಗೂ ಗದಗ ಮಹಿಳಾ ಪೊಲೀಸ್ ಠಾಣೆಯ ಸಿಬ್ಬಂದಿಯ ಕಾರ್ಯವನ್ನು ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಿಥುನ್ ಎಚ್. ಎನ್., ಐಪಿಎಸ್ ಅವರು ಶ್ಲಾಘಿಸಿದ್ದಾರೆ.

## ಶರನ್ನವರಾತ್ರಿ: ಶ್ಲೋಕಗಳ ಸೌಂದರ್ಯ ಲಹರಿ ಸಾಮೂಹಿಕ ಪಠಣ

**ಹರಿಹರ:** ನಗರದ ನಡುವಲಪೇಟೆಯ ನಾಮದೇವ ಕಲ್ಯಾಣ ಮಂಟಪದಲ್ಲಿ ಮಂಗಳವಾರ ಸಾಮೂಹಿಕ ದಸರಾ ಮಹೋತ್ಸವ ಸಮಿತಿಯಿಂದ ಶರನ್ನವರಾತ್ರಿ ಅಂಗವಾಗಿ ವಿವಿಧ ಮಹಿಳಾ ಮಂಡಳಿಗಳ ಸದಸ್ಯರಿಂದ 100 ಶ್ಲೋಕಗಳ ಸೌಂದರ್ಯ ಲಹರಿ ಸಾಮೂಹಿಕ ಪಠಣ ನಡೆಯಿತು.

ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡು ಭಕ್ತಿಭಾವದಿಂದ ಸೌಂದರ್ಯ ಲಹರಿಯ ಶ್ಲೋಕಗಳನ್ನು ಸಾಮೂಹಿಕವಾಗಿ ಪಠಿಸಿದರು. ಈ ಸಂದರ್ಭದಲ್ಲಿ ಮಹಿಳೆಯರಿಗೆ ತೆಂಗಿನಕಾಯಿ, ಬಳೆ, ಅರಿಶಿನ ಹಾಗೂ ಕುಂಕುಮ ನೀಡಿ ಉಡಿ ತುಂಬಲಾಯಿತು.

ದಸರಾ ಮಹೋತ್ಸವ ಸಮಿತಿ ಅಧ್ಯಕ್ಷ ಶಂಕರ್ ಖಟಾವ್ಕರ್, ಪದಾಧಿಕಾರಿಗಳಾದ ನಾಗಮಣಿ ಶಾಸ್ತ್ರಿ, ಶಿವಪ್ರಕಾಶ್ ಶಾಸ್ತ್ರಿ, ಅಜಿತ್ ಸಾವಂತ್, ಅಂಬಾಸ ಹಂಸಾಗರ್, ಮಾಧವಿ ಮಾಲತೇಶ್ ಭಂಡಾರಿ, ಪ್ರಕಾಶ ಶ್ರೇಷ್ಠಿ, ಟಿ.ಜೆ. ಮುರುಗೇಶಪ್ಪ, ಪರಶುರಾಮ ಕಾಟ್ವೆ, ಬಿ.ಎಂ. ವಿಶ್ವನಾಥ್, ರಾಜು ಖಿರೋಜಿ, ಬಿ. ಹನುಮಂತರೆಡ್ಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

UTTARA KARNATAKA SUDDIGALU KANNADA DAILY MORNING OWNER, PUBLISHER, BY: AVINASH S SALIMANI, PUBLISHED FROM: 220 SHIVANAND NAGAR, NAVANAGAR, HUBLI_DHARWAD KARNATAKA- 580025, PRINTED AT: SHIVANI PRINTERS, NEW COURT OPPOSITE PLOT NO 28RS NO 312/ 3B GARAG COMPLEX GADAG, AT: GADAG- 582101, AT: KARNATAKA, EDITOR BY : AVINASH S SALIMANI